# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಆಗಸ್ಟ್ 14, 2024

ಸಂಪುಟ : 51 ಸಂಚಿಕೆ : 92 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ಡ್ಯಾಂ ಗೇಟ್ ತ್ವರಿತ ದುರಸ್ತಿ

**ರೈತರಿಗೆ ಆತಂಕ ಬೇಡ ಮುಖ್ಯಮಂತ್ರಿ**

ಬೆಂಗಳೂರು, ಆ. 13 - ತುಂಗಭದ್ರಾ ಜಲಾಶಯದ ಗೇಟ್ ದುರಸ್ತಿಯನ್ನು ತ್ವರಿತವಾಗಿ ಮುಗಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದ್ದು, ರೈತರು ಆತಂಕಪಡುವ ಅಗತ್ಯವಿಲ್ಲ. ತುಂಗಭದ್ರಾ ಜಲಾಶಯ ಮತ್ತೆ (2ನೇ ಪುಟಕ್ಕೆ)

## ಮಹಿಳಾ ಕಾಂಗ್ರೆಸ್‌ಗೆ ಸೌಮ್ಯ



ಬೆಂಗಳೂರು, ಆ. 13 - ಬೆಂಗಳೂರಿನ ಜಯನಗರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರೂ, ಸಚಿವ ರಾಮಲಿಂಗಾರೆಡ್ಡಿ ಪುತ್ರಿಯೂ ಆಗಿರುವ ಸೌಮ್ಯ ರೆಡ್ಡಿ ಅವರು ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಎಐಸಿಸಿ ಪ್ರಧಾನ (4ನೇ ಪುಟಕ್ಕೆ)

## ಏಳು ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ



**ದಾವಣಗೆರೆಯಲ್ಲಿ ಬಿಜೆಪಿಯರ ದುರಾಡಳಿತ ಅಂತ್ಯ - ಸಚಿವ ಎಸ್ಸೆಸ್ಸೆಂ**

ದಾವಣಗೆರೆ, ಆ. 13 - ನಗರ ಮತ್ತು ಜಿಲ್ಲೆಯಲ್ಲಿ ಬಿಜೆಪಿಗರ ದುರಾಡಳಿತ ಕಳೆದ ವರ್ಷದಿಂದ ಅಂತ್ಯಗೊಳ್ಳುತ್ತಾ ಬಂದಿದ್ದು, ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆಯಲ್ಲಿ ಬಿಜೆಪಿಗೆ ಜನತೆ ತಕ್ಕ ಪಾಠ ಕಲಿಸಿದೆ. ಅವರ ದುರಾಡಳಿತಕ್ಕೆ ಬ್ರೇಕ್ ಬಿದ್ದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಹೇಳಿದರು.

ಮಹಾನಗರ ಪಾಲಿಕೆಯ 16, 38, 30, 41 ಮತ್ತು 31 ನೇ ವಾರ್ಡುಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಚಾಲನೆ ನೀಡಿ ಅವರು ಮಾತನಾಡಿದರು.

ದಾವಣಗೆರೆ ಜಿಲ್ಲೆಯ ಜನತೆ, ಬಿಜೆಪಿಗರ ದುರಾಡಳಿತವನ್ನು ಸಹಿಸಲು ಸಾಕಾಗದೇ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿದ್ದು, ಕಾಂಗ್ರೆಸ್ ಪಕ್ಷ ಈ ಹಿಂದೆ ನೀಡಿದ ಭರವಸೆಯಂತೆ ನಡೆದುಕೊಂಡು ಬರುತ್ತಿದೆ. ಇಂದೂ ಸಹ ಕಾಂಗ್ರೆಸ್ ಪಕ್ಷ ಅಭಿವೃದ್ಧಿ ಪರ ಚಿಂತನೆ ನಡೆಸಿದ್ದು ಬಿಜೆಪಿಗರು ಮಾಡಿರುವ ಎಲ್ಲಾ ಅಕ್ರಮಗಳನ್ನು ಬಯಲು ಮಾಡುವುದಾಗಿ ತಿಳಿಸಿದರು.

ಕಳೆದ ಐದು ವರ್ಷದಲ್ಲಿ ಬಿಜೆಪಿಗರು ದಾವಣಗೆರೆ (4ನೇ ಪುಟಕ್ಕೆ)


### ಸಾರ್ವಜನಿಕ ಪ್ರಕಟಣೆ (ಆರನೇ ಕಲ್ಲು)

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ ಆರ್. ಎಸ್. ಹೇಮಣ್ಣ ಇವರು (ವಾದಿಗಳು)., ಚಂದ್ರಶೇಖರ್ ಎನ್.ಕೆ. ಮತ್ತು ರಾಜಶೇಖರ್ ಜಿ., ಇವರುಗಳು (ಪ್ರತಿವಾದಿಗಳು). ಇವರ ವಿರುದ್ಧ ದಾವಣಗೆರೆ ತಾಲ್ಲೂಕು, ಸಬ್ ರಿಜಿಸ್ಟ್ರಾರ್ ರವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮದ ರಿ. ಸರ್ವೆ ನಂ.51/14 ರಲ್ಲಿ 4 ಎಕರೆ 20 ಗುಂಟೆ ಪೂರಾ ವಿಸ್ತೀರ್ಣವುಳ್ಳ ಜಮೀನು ಹಾಗೂ ಇಲ್ಲಿ ಸೇರಿದ ಆಸ್ತಿ ಮೇಲೆ ಅಸಲು ದಾವೆ ಸಂಖ್ಯೆ:623/2021 ನ್ನು ಘೋಷಣಾತ್ಮಕ, ಶಾಶ್ವತ ನಿರ್ಬಂಧಕಾಜ್ಞೆ ಮತ್ತು ಇನ್ನಿತರೆ ಪರಿಹಾರಗಳನ್ನು ಕೋರಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ ಕೋರ್ಟ್ ದಾವಣಗೆರೆ, ಇಲ್ಲಿ ಸಲ್ಲಿಸಿದ್ದು ಸದರಿ ಪ್ರಕರಣವು ಪ್ರಸ್ತುತ ಈಗ ಚಾಲ್ತಿಯಲ್ಲಿರುತ್ತದೆ. ಅಲ್ಲದೆ ಘನ ನ್ಯಾಯಾಲಯವು ಎದುರುದಾರರ ಅಂದರೆ ಪ್ರತಿವಾದಿಗಳ ವಿರುದ್ಧ ಸದರಿ ಮೇಲಿನ ಅನುಸೂಚಿಯ ಸ್ವತ್ತನ್ನು ಯಾರಿಗೂ, ಯಾವುದೇ ರೀತಿಯಿಂದ ಮಾರಾಟ, ಖಾತೆ ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆ. ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು ಎದುರುದಾರರು ಅಂದರೆ ಪ್ರತಿವಾದಿಯರು ಮಾರಲು, ಖಾತೆ ಬದಲಾವಣೆ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡುವುದು ಬೆಳಕಿಗೆ ಬಂದಿರುತ್ತದೆ. ಈ ಮೇಲಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಅಥವಾ ಯಾರಾದರು ಮಾರಾಟ ಪ್ರಕ್ರಿಯೆಯಲ್ಲಿ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳಲ್ಲಿ ತೊಡಗಿದರೆ, ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು.

ಕಕ್ಷಿದಾರರ ಸಹಿ (ವಾದಿ)
(ಆರ್.ಎಸ್. ಹೇಮಣ್ಣ)
(ಅಗ್ರಿಮೆಂಟ್ ಹೋಲ್ಡರ್)

ದಿನಾಂಕ : 13.08.2024, ಸ್ಥಳ : ದಾವಣಗೆರೆ,
ಮೊ : 90085 83336, 99804 48033



### ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ಕೆ.ಎಂ. ಶಿವಮೂರ್ತಯ್ಯ ಕಂಬಳಿ**

ನೀವು ನಮ್ಮನ್ನಗಲಿ ಇಂದಿಗೆ
ನಾಲ್ಕು ವರ್ಷಗಳಾದವು. ಸದಾ ನಿಮ್ಮ
ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...


ಮಗ : ಶ್ರೀ ಕೆ.ಎಂ. ರಂಜಿತ್, ರೂಪ
ಮೊಮ್ಮಕ್ಕಳಾದ : ಅನ್ವಿಕ, ಅನ್ವಿಕ
ದಿ. ಕೆ.ಎಂ. ಶಾಂತ
ಕೆ.ಎಂ. ವೀರಭದ್ರಯ್ಯ ಅಂಡ್ ಸನ್ಸ್
ಶ್ರೀಮತಿ ಜಯಲಕ್ಷ್ಮಿ ದಿ. ಕೆ.ಎಂ. ವೀರಯ್ಯ ಮತ್ತು ಮಕ್ಕಳು
ಶ್ರೀಮತಿ ವಿಮಲ ದಿ. ಕೆ.ಎಂ. ಬಸವರಾಜಯ್ಯ ಮತ್ತು ಮಕ್ಕಳು
ಕೆ.ಎಂ. ರುದ್ರಯ್ಯ ಮತ್ತು ಮಕ್ಕಳು, ಕಂಬಳಿ ಸಹೋದರರು



॥ ಶ್ರೀ ಶಿವ ನಾರದಮುನಿ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಜನನ : 28.11.1966



ನಿಧನ : 10.08.2024

ದಾವಣಗೆರೆ ತಾ. ಜಿ. ಎಲೆಬೇತೂರು ಗ್ರಾಮದ ವಾಸಿ
ದಿ.ಶ್ರೀಮತಿ ಅನುಸೂಯಮ್ಮ ದಿ. ಬುಡ್ನಾರಪ್ಪ ಬಸಪ್ಪನವರ ಮಗನಾದ
ಬುಡ್ನಾರಪ್ಪ ನಾಗರಾಜಪ್ಪ ಮತ್ತು ಸಹೋದರರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ,

ದಿನಾಂಕ : 10.08.2024ನೇ ಶನಿವಾರ ರಾತ್ರಿ 01.17ಕ್ಕೆ ನನ್ನ ಸಹೋದರರಾದ

**ಬುಡ್ನಾರಪ್ಪ ದಿ. ಶ್ರೀ ಕರಿಬಸಪ್ಪ**

ಕಾಂಗ್ರೆಸ್ ಮುಖಂಡರು, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು ಹಾಗೂ ಹಾಲಿ ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 14.08.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಶರಣ ಬಸವೇಶ್ವರ ಕಲ್ಯಾಣ ಮಂಟಪ, ಬಿ. ಕಲ್ಪನಹಳ್ಳಿ, ದಾವಣಗೆರೆ ತಾ. ಜಿ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬದವರು :
• ಶ್ರೀಮತಿ ರೇಣುಕಮ್ಮ ಬಿ.ಕರಿಬಸಪ್ಪ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು ಮತ್ತು ಮಕ್ಕಳು
• ಶ್ರೀಮತಿ ಮಂಜುಳ, ಶ್ರೀಬಿ. ನಾಗರಾಜಪ್ಪ ಮತ್ತು ಮಕ್ಕಳು
• ಶ್ರೀಮತಿ ಕಲ್ಪನಾ ಶ್ರೀ ಬಿ.ಶಿವಕುಮಾರ್, ಗ್ರಾ.ಪಂ.ಸದಸ್ಯರು ಮತ್ತು ಮಕ್ಕಳು
• ಶ್ರೀಮತಿ ಬಸಮ್ಮ ಶ್ರೀ ದೇವರಾಜಪ್ಪ ಮತ್ತು ಮಕ್ಕಳು, ಸಿರಿಗೆರೆ.
• ಶ್ರೀಮತಿ ಅಕ್ಕಮ್ಮ, ಶ್ರೀ ವಿಶ್ವೇಶ್ವರಪ್ಪ ಮತ್ತು ಮಕ್ಕಳು, ಬೆಣ್ಣೆಹಳ್ಳಿ
• ಶ್ರೀಮತಿ ನಯನ, ಶ್ರೀ ವಿನಾಯಕ • ಚಿ|| ದಯಾನಂದ್, ಬುಡ್ನಾರಪ್ಪರ ವಂಶಸ್ಥರು ಮತ್ತು ಎಲೇಬೇತೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. : 99005 65472, 95358 51819

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.





### ಆವರಗೊಳ್ಳದ 200 TPD ಸಾಮರ್ಥ್ಯದ ನೂತನ ಘನತ್ಯಾಜ್ಯ ಘಟಕ ಉದ್ಘಾಟನೆ

**ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**

ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು
ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ



ದಿನಾಂಕ : 14.08.2024ರ ಬುಧವಾರ
ಸಂಜೆ 5.00 ಗಂಟೆಗೆ
ಸ್ಥಳ : ಆವರಗೊಳ್ಳ ಘನ ತ್ಯಾಜ್ಯ ಘಟಕ ಆವರಣ

| ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|
| ದಾವಣಗೆರೆ ಮಹಾನಗರ ಪಾಲಿಕೆಯ ಆವರಗೊಳ್ಳ ಘನತ್ಯಾಜ್ಯ ಘಟಕದಲ್ಲಿ ಸಿ.ಸಿ. ರಸ್ತೆ, ಚರಂಡಿ, ಕಟ್ಟಡ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆ | 1766.94 |
| ದಾವಣಗೆರೆ ಮಹಾನಗರ ಪಾಲಿಕೆ ವತಿಯಿಂದ ಅಭಿವೃದ್ಧಿ ಪಡಿಸಿರುವ 200 ಟಿ.ಪಿ.ಡಿ. ಸಾಮರ್ಥ್ಯದ ನೂತನ ಘನತ್ಯಾಜ್ಯ ಸಂಸ್ಕರಣಾ ಸೌಲಭ್ಯ ಅಭಿವೃದ್ಧಿ ಪಡಿಸುವ ಕಾಮಗಾರಿ ಉದ್ಘಾಟನಾ ಸಮಾರಂಭ | 463.00 |

ಈ ಕಾಮಗಾರಿಗಳ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ ಮಹಾನಗರ ಪಾಲಿಕೆಯ ಮಹಾಪೌರರು, ಆಯುಕ್ತರು, ಸದಸ್ಯರುಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ

**ಹೃದಯಪೂರ್ವಕ ಸ್ವಾಗತ ಸುಸ್ವಾಗತ**

# ಕನ್ನಡ ಭಾಷೆ ಉಳಿಸುವ ಜವಾಬ್ದಾರಿ ವಿದ್ಯಾರ್ಥಿಗಳಿಗಿದೆ

## ಹರಪನಹಳ್ಳಿ : 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಚ್. ಮಲ್ಲಿಕಾರ್ಜುನ



ಹರಪನಹಳ್ಳಿ, ಆ.13- ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಕನ್ನಡ ಭಾಷೆ ಹೆಚ್ಚು ಶ್ರೀಮಂತವಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ವಿದ್ಯಾರ್ಥಿಗಳ ಮೇಲಿದೆ ಎಂದು ಎಸ್.ಯು.ಜೆ.ಎಂ ಕಾಲೇಜಿನ ಕನ್ನಡ ಉಪನ್ಯಾಸಕ ಎಚ್. ಮಲ್ಲಿಕಾರ್ಜುನ್ ಹೇಳಿದರು.

ನವಜ್ಯೋತಿ ಸಾಂಸ್ಕೃತಿಕ ಸಂಸ್ಥೆಯಿಂದ ಪಟ್ಟಣದ ಬಸಮ್ಮ ಕಲಾಮಂದಿರದಲ್ಲಿ ಇಂದು ಆಯೋಜಿಸಿದ್ದ 2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಪ್ರಥಮ ಭಾಷೆ ಕನ್ನಡದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 'ಕನ್ನಡ ರತ್ನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳು ಕನ್ನಡ ಸಾಹಿತ್ಯದ ಮೇರು ಕೃತಿಗಳನ್ನು ಹೆಚ್ಚು ಓದಬೇಕು. ಕಾವ್ಯ, ಕಥೆ, ನಾಟಕ, ಕಾದಂಬರಿ, ಪ್ರವಾಸ ಕಥನ ಸೇರಿದಂತೆ ಎಲ್ಲಾ ಆಯಾಮಗಳ ಪುಸ್ತಕಗಳನ್ನು ನಿರಂತರವಾಗಿ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಳೆಗನ್ನಡ, ನವ್ಯ ಸಾಹಿತ್ಯ ಮಾತ್ರವಲ್ಲದೆ ಹೊಸ ತಲೆಮಾರಿನ ಕವಿ ಲೇಖಕರ ಕೃತಿಗಳನ್ನು ಅಭ್ಯಾಸ ಮಾಡಬೇಕು. ಆಗ ಮಾತ್ರ ಕವಿ ಹಾಗೂ ಲೇಖಕರಾಗಲು ಸಾಧ್ಯ ಎಂದು ಮಕ್ಕಳಿಗೆ ಹೇಳಿದರು.

ಹೂವಿನ ಹಡಗಲಿಯ ಸಿಂಚನ ಪ್ರಕಾಶನದ ಸುರೇಶ ಅಂಗಡಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರಾಮೀಣ ಪ್ರದೇಶದ ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳೇ ಹೆಚ್ಚು ಸಾಧನೆ ಮಾಡಿದ್ದಾರೆ ಎಂದ ಅವರು, ದುಡಿಮೆಯ ಒಂದು ಭಾಗವನ್ನು ಕನ್ನಡ ಕಟ್ಟುವ ಕಾರ್ಯಕ್ಕೆ ವಿನಿಯೋಗಿಸಿ, ಎಂದು ಮನವಿ ಮಾಡಿದರು.

ನವಜ್ಯೋತಿ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾದ ಸಪ್ನ ಮಲ್ಲಿಕಾರ್ಜುನ್ ಮಾತನಾಡಿ, ಸತತ ಅಧ್ಯಯನ ಹಾಗೂ ನಿರಂತರ ಪ್ರಯತ್ನದಿಂದ ಎಲ್ಲವೂ ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಆತ್ಮವಿಶ್ವಾಸ ಕಳೆದುಕೊಳ್ಳಬಾರದು ಎಂದು ತಿಳಿಸಿದರು.

ರಾಜ್ಯದ 225 ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪತ್ರಕರ್ತ ಎಂ. ದಯಾನಂದ, ಕೆ. ಕರಿಬಸಪ್ಪ, ಸುರೇಶ್ ಅಂಗಡಿ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸಾಧಕ ವಿದ್ಯಾರ್ಥಿಗಳಿದ್ದರು.

## ನಗರದಲ್ಲಿ ಇಂದು ರಂಗೋಲಿ ಸ್ಪರ್ಧೆ

ಹರ್‌ಘರ್ ತಿರಂಗಾ ಕಾರ್ಯಕ್ರಮದ ಅಂಗವಾಗಿ ನಗರದ ಗ್ಲಾಸ್ ಹೌಸ್ ಆವರಣದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಹರ್ ಘರ್ ತಿರಂಗಾ ರಂಗೋಲಿ ಸ್ಪರ್ಧೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಭಿಕುಮಾರ್ ತಿಳಿಸಿದ್ದಾರೆ.

# ಹರ್ - ಘರ್ ತಿರಂಗಾ ಅಭಿಯಾನ ಮ್ಯಾರಾಥಾನ್, ಗೀತ ಗಾಯನ



ದಾವಣಗೆರೆ, ಆ. 13 - ಹರ್ ಘರ್ ತಿರಂಗಾ ಅಭಿಯಾನದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಇಂದು ಸಂಜೆ ಮ್ಯಾರಾಥಾನ್ ನಡೆಯಿತು.

ಮ್ಯಾರಾಥಾನ್ ನಂತರ ಜಿಲ್ಲಾಡಳಿತ ಭವನದ ಮೆಟ್ಟಿಲುಗಳ ಮೇಲೆ ತಿರಂಗಾ ಗೀತ-ಗಾಯನದ ಅಂಗವಾಗಿ ವಿವಿಧ ದೇಶಭಕ್ತಿ ಗೀತೆಗಳನ್ನು ಹಾಡಲಾಯಿತು. ವಿದ್ಯಾರ್ಥಿಗಳು ತಿರಂಗಾ ಯಾತ್ರೆಯಲ್ಲಿ ಭಾಗವಹಿಸಿದ್ದರು.

ಈ ವೇಳೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು, ಶಾಲಾ, ಕಾಲೇಜಿನ ವಿದ್ಯಾರ್ಥಿಗಳು, ಸ್ವ-ಸಹಾಯ ಸಂಘದ ಮಹಿಳಾ ಸದಸ್ಯರು ಭಾಗವಹಿಸಿದ್ದರು.

**ಭದ್ರಾ ಜಲಾಶಯ**

| | |
|---|---|
| ನೀರಿನ ಮಟ್ಟ : 180 ಅಡಿ 1ಇಂಚು | ಒಳ ಹರಿವು : 6075 ಕ್ಯೂಸೆಕ್ಸ್ |
| ಹೊರ ಹರಿವು : 7811 ಕ್ಯೂಸೆಕ್ಸ್ | ಕಳೆದ ವರ್ಷ : 167 ಅಡಿ |

# ಮಲೇಬೆನ್ನೂರಿನ ಈಶ್ವರೀಯ ವಿವಿಯಲ್ಲಿ ರಕ್ಷಾಬಂಧನ



## ಅಭಿನಂದನಾ ಕಾರ್ಯಕ್ರಮ

ಮಲೇಬೆನ್ನೂರು, ಆ. 13- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಪೌರ ಕಾರ್ಮಿಕರಿಗೆ ನಿನ್ನೆ ಹಮ್ಮಿಕೊಂಡಿದ್ದ ರಕ್ಷಾಬಂಧನ ಮತ್ತು ಅಭಿನಂದನಾ ಕಾರ್ಯಕ್ರಮವನ್ನು ಈಶ್ವರೀಯ ವಿಶ್ವವಿದ್ಯಾಲಯದ ಗದಗ ಮತ್ತು ಧಾರವಾಡ ಕೇಂದ್ರಗಳ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಜಯಂತಿ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಯಂತಿ ಅವರು, ದೃಷ್ಟಿ ಪರಿವರ್ತನೆ ಮಾಡುವುದು ಮತ್ತು ದುರ್ಗುಣ, ದುರಾಲೋಚನೆಯಿಂದ ಆಚೆ ಸರಿದು ಸೌಹಾರ್ದತೆ, ಶಾಂತಿ ಸಂದೇಶ ಸಾರುವುದನ್ನು ತಿಳಿಸುವುದೇ ರಕ್ಷಾಬಂಧನದ ಉದ್ದೇಶವಾಗಿದೆ. ಆಹಾರಕ್ಕೆ ಕ್ರಿಮಿ ಬಾರದಿರಲು, ಕೆಡದಿರಲು ಲಕ್ಷ್ಮಣರೇಖೆ ಹಾಕುತ್ತೇವೆ. ರಾಜ್ಯಕ್ಕೆ ಕೋಟೆ, ಮನೆಗೆ ಗೋಡೆ, ಕಾಲುಗಳಿಗೆ ಪಾದರಕ್ಷೆ ಹಾಕುವಂತೆ ಸಹೋದರಿಯರಿಗೆ ಸಹೋದರರು ರಕ್ಷಣೆಯ ಬಂಧವಾಗಿದ್ದಾರೆ ಎಂದು ತಿಳಿಸಿದರು. ಮನೆಯಲ್ಲಿ ದೇವರ ಕೊಠಡಿ ಆತ್ಮಕ್ಕೆ ಶಕ್ತಿ ನೀಡುವ ಸ್ಥಳವಾಗಿದೆ. ಸರ್ವ ಆತ್ಮಗಳು ದೇವರ ಕೋಣೆಯಲ್ಲಿ ಕುಳಿತು ಧ್ಯಾನದಿಂದ ಮನಸ್ಸನ್ನು ಚಾರ್ಜ್ ಮಾಡಿಕೊಳ್ಳಬೇಕು ಎಂದರು.

ಮುಖ್ಯಾಧಿಕಾರಿ ಹನುಮಂತಪ್ಪ ಭಜಕ್ಕನವರ್ ಮಾತನಾಡಿ, ಬ್ರಹ್ಮಾಕುಮಾರಿಯರು ಪುರಸಭೆ ಸಿಬ್ಬಂದಿಗೆ ಪರಮಾತ್ಮನ ಸಂದೇಶ ನೀಡಿ, ರಕ್ಷಾ ಬಂಧನ ಧಾರಣೆ ಮಾಡಿರುವ ಈ ವಿಶೇಷ ಸಂದರ್ಭವನ್ನು ನಾವು ಇಂದಿಗೂ ಮರೆಯುವುದಿಲ್ಲ ಎಂದರು.

ಹಿರೇಕೆರೂರಿನ ವಿ ವಿ ಕೇಂದ್ರದ ರಾಜಯೋಗಿನಿ ಬ್ರಹ್ಮಾಕುಮಾರಿ ಸೌಭಾಗ್ಯ ಅವರು, ಆತ್ಮ ಮತ್ತು ಪರಮಾತ್ಮನ ವ್ಯತ್ಯಾಸ ಹಾಗೂ ತರಗತಿಯ ಕೋರ್ಸ್ ತಿಳಿಸಿಕೊಟ್ಟರು.

ಈಶ್ವರೀಯ ವಿಶ್ವವಿದ್ಯಾಲಯದ ಮಲೇಬೆನ್ನೂರು ಶಾಖೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಾಂತಾಜಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಬಿ. ಪಂಚಣ್ಣ ದೊಡ್ಡ ಬಸಣ್ಣ, ಹೆಚ್. ಎಸ್. ವೀರಭದ್ರಯ್ಯ, ರುದ್ರಯ್ಯ, ಪುರಸಭೆ ಆರೋಗ್ಯ ನಿರೀಕ್ಷಕರಾದ ನವೀನ್, ಶಿವರಾಜ್ ಕೂಸಗಟ್ಟಿ, ಅವಿನಾಶ್, ಪೌರ ಕಾರ್ಮಿಕರಾದ ಫತಾವುಲ್ಲಾ, ಆಂಜನೇಯ, ಕಿಜರ್ ಅಲಿ, ವೆಂಕಟೇಶ್ ಮತ್ತಿತರರು ತಮ್ಮ ಅನಿಸಿಕೆ ಹಂಚಿಕೊಂಡರು.

# ಡ್ಯಾಂ ಗೇಟ್ ತ್ವರಿತ ದುರಸ್ತಿ : ಸಿಎಂ ಸಿದ್ದರಾಮಯ್ಯ

(1ನೇ ಪುಟದಿಂದ) ತುಂಬುವ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ತುಂಗಭದ್ರಾ ಜಲಾಶಯದ ಗೇಟ್ ಮುರಿದಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಲಾಶಯದ ಗೇಟ್‌ಗಳ ನಿರ್ಮಾಣ ತಜ್ಞ ಹಾಗೂ ಸುರಕ್ಷತೆ ತಜ್ಞ ಇಂಜಿನಿಯರ್ ಕನ್ನಯ್ಯ ನಾಯ್ಡು ಅವರ ಜೊತೆ ಚರ್ಚಿಸಿದ್ದೇನೆ. ಅವರಿಂದ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.



ಜಲಾಶಯದ ನೀರನ್ನು ಹೊರ ಬಿಡದೇ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಿಲ್ಲ. ನೀರಿನ ಮಟ್ಟವನ್ನು ಕಡಿಮೆ ಮಾಡಲಾಗುತ್ತಿದೆ. ಆನಂತರವೂ 64 ಟಿಎಂಸಿ ನೀರು ಉಳಿಯುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು. ರೈತರ ಮೊದಲನೇ ಬೆಳೆಗೆ 90 ಟಿಎಂಸಿ ನೀರು ಬೇಕಾಗಿದ್ದು, ಈ ಪ್ರಮಾಣದ ನೀರು ಜಲಾಶಯದಲ್ಲಿ ಲಭ್ಯವಿದೆ ಎಂದೂ ಅವರು ತಿಳಿಸಿದರು.

ಕರ್ನಾಟಕದಲ್ಲಿ ಸುಮಾರು 9 ಲಕ್ಷ ಹಾಗೂ ಆಂಧ್ರಪ್ರದೇಶ, ತೆಲಂಗಾಣಗಳಲ್ಲಿ ಸುಮಾರು 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಿರುವ ರೈತರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅದಲ್ಲದೇ, ಆಗಸ್ಟ್ 17 ರಿಂದ ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬರುವ ನಿರೀಕ್ಷೆ ಇದೆ. ಬಾಗಿನ ಅರ್ಪಿಸಲು ನಾನು ಮತ್ತೊಮ್ಮೆ ಬರುತ್ತೇನೆ ಎಂದು ತಿಳಿಸಿದರು.

ಗೇಟ್‌ನ ದುರಸ್ತಿ ಕಾರ್ಯಕ್ಕೆ ಕನಿಷ್ಟ 4 ರಿಂದ 5 ದಿನಗಳು ಬೇಕಾಗಲಿವೆ. ಹಿಂದುಸ್ಥಾನ್ ಇಂಜಿನಿಯರಿಂಗ್ಸ್ ಹಾಗೂ ನಾರಾಯಣ ಇಂಜಿನಿಯರಿಂಗ್ಸ್ ಅವರಿಗೆ ಹೊಸ ಗೇಟ್ ತಯಾರಿ ಹೊಣೆ ವಹಿಸಲಾಗಿದ್ದು, ಕನ್ನಯ್ಯ ನಾಯ್ಡು ಅವರ ಸಲಹೆ ಮೇರೆಗೆ ದುರಸ್ತಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

2019ರಲ್ಲಿ ಜಲಾಶಯದ ನೀರು ಬಿಡುವ ಕಾಲುವೆಗಳಲ್ಲಿ ಸಮಸ್ಯೆ ಆಗಿತ್ತೇ ಹೊರತು, ಜಲಾಶಯದ ಗೇಟ್ ಗಳಲ್ಲಿ ಯಾವುದೇ ಸಮಸ್ಯೆ ಆಗಿರಲಿಲ್ಲ. 70 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗೇಟ್‌ನ ಸರಪಳಿ ತುಂಡಾಗಿರುವ ಘಟನೆ ನಡೆದಿದೆ. ತಜ್ಞರ ಸಲಹೆಯಂತೆ 50 ವರ್ಷಗಳಿಗೊಮ್ಮೆ ಗೇಟ್ ಹಾಗೂ ಸರಪಳಿಗಳನ್ನು ಬದಲಾಯಿಸಬೇಕಾಗಿದ್ದು, ಇನ್ನು ಮುಂದೆ ತಜ್ಞರ ಸಲಹೆಯಂತೆ ತುಂಗಭದ್ರಾ ಮಂಡಳಿ ಹಾಗೂ ಸಂಬಂಧಪಟ್ಟ ಸರ್ಕಾರಗಳು ಕ್ರಮ ಕೈಗೊಳ್ಳಲಿವೆ ಎಂದು ಹೇಳಿದರು.

ತುಂಗಭದ್ರಾ ಜಲಾಶಯಕ್ಕೆ ಸಂಬಂಧಿಸಿದಂತೆ ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿದ ಸಿದ್ದರಾಮಯ್ಯ, ಜಲಾಶಯದ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿ ತುಂಗಭದ್ರಾ ಜಲಾಶಯ ಮಂಡಳಿಯದ್ದಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ನೇಮಿಸಿದ ಅಧ್ಯಕ್ಷರಿದ್ದಾರೆ. ಗೇಟ್ ಸಮಸ್ಯೆ ಬಗ್ಗೆ ಬಿಜೆಪಿಯವರು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡಬೇಕಿತ್ತು ಎಂದರು.

ಮಂಡಳಿಯಲ್ಲಿ ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದ ಸದಸ್ಯರು ಮಂಡಳಿ ಯಲ್ಲಿರುತ್ತಾರೆ. ಇಂತಹ ಘಟನೆಗಳಿಗೆ ಕಾರಣ ವೇನು ಎಂಬುದರ ಬಗ್ಗೆ ವಿಶ್ಲೇಷಣೆ ಮಾಡುವ ಅಗತ್ಯವಿದೆ. ಈ ವಿಷಯದಲ್ಲಿ ನಾನು ರಾಜಕೀಯ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.


## 12ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಬಸಮ್ಮ ಮಾಗಿ**

(ದಿ|| ವೀರಬಸಪ್ಪ ಮಾಗಿ ಅವರ ಧರ್ಮಪತ್ನಿ)

*"ನಿಮ್ಮ ನೆನಪು ಸದಾ ಹಚ್ಚ ಹಸಿರು*
*ನಿಮ್ಮ ಆದರ್ಶವೇ ನಮಗೆ ದಾರಿದೀಪ*
*ನಿಮ್ಮ ಮಾರ್ಗದರ್ಶನವೇ ನಮಗೆ ಚೇತನ"*

ಸದಾ ಸ್ಮರಿಸುವ...

- ಶ್ರೀಮತಿ ಲತಾ ಮತ್ತು ಪಂಚಾಕ್ಷರಿ
- ಶ್ರೀಮತಿ ರೂಪಾ ಮತ್ತು ಕೈಲಾಸ್ ಬಾಬು ಮಾಗಿ
- ಶ್ರೀಮತಿ ದಾನೇಶ್ವರಿ ಮತ್ತು ಎಂ.ವಿ. ಜಯಪ್ರಕಾಶ್ ಮಾಗಿ
- ಶ್ರೀಮತಿ ಶಿವಲೀಲಾ ಮತ್ತು ರಾಜೇಶ್

ಮೊಮ್ಮಕ್ಕಳು :

- ಮಮತ ✦ ಗಣೇಶ್ ✦ ನಿಖಿಲ್ ಮಾಗಿ
- ಹರ್ಷ ಮಾಗಿ ✦ ಕಿಶೋರ್ ಮಾಗಿ
- ದಿಶಾ ✦ ಶ್ರೇಯಸ್

ಹಾಗೂ ಮಾಗಿ ಕುಟುಂಬ ವರ್ಗದವರು, ದಾವಣಗೆರೆ

- ರೈಸ್ ಕಾರ್ನರ್
- ಹರ್ಷ ಕಮರ್ಷಿಯಲ್ಸ್
- ಜೆ.ಪಿ. ಎಂಟರ್‌ಪ್ರೈಸಸ್


ಗುಜರಿ ಲೈನ್ ಚೌಕಿಪೇಟೆ ಹಿಂಭಾಗ, ದಾವಣಗೆರೆ.


## ಆರ್.ಎಲ್. ಹನುಮಂತಪ್ಪ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ. 13 - ನಗರದ ಆರ್.ಎಲ್. ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಶೇ. 85ರಷ್ಟು ಅಂಕ ಗಳಿಸಿದ ಕುರುಹಿನಶೆಟ್ಟಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ಕೊನೆ ದಿನವಾಗಿದೆ. ಅರ್ಹ ವಿದ್ಯಾರ್ಥಿಗಳು ಶ್ರೀ ನೀಲಕಂಠೇಶ್ವರ ದೇವಸ್ಥಾನ, ಕುರುಹಿನಶೆಟ್ಟಿ ಸಮಾಜ, ಕೆ.ಟಿ.ಜೆ. ನಗರ, 14ನೇ ಕ್ರಾಸ್, 4ನೇ ಮೇನ್, ದಾವಣಗೆರೆ, ಮೊ : 94492 93249 ಅಥವಾ 86604 60744 ಕ್ಕೆ ಸಂಪರ್ಕಿಸಬಹುದು.

## ಉಪ್ಪು, ಸಕ್ಕರೆಗಳಲ್ಲಿ ಮೈಕ್ರೋಪ್ಲಾಸ್ಟಿಕ್



ನವದೆಹಲಿ, ಆ. 13 - ಭಾರತ ದಲ್ಲಿ ಮಾರಲಾಗುವ ಎಲ್ಲಾ ಉಪ್ಪು ಹಾಗೂ ಸಕ್ಕರೆ ಬ್ರಾಂಡ್‌ಗಳಲ್ಲಿ ಮೈಕ್ರೋ ಪ್ಲಾಸ್ಟಿಕ್ ಅಂಶ ಕಂಡು ಬಂದಿದೆ ಎಂದು ಅಧ್ಯಯನ ಒಂದು ತಿಳಿಸಿದೆ. ಆನ್‌ಲೈನ್ ಹಾಗೂ ಸ್ಥಳೀಯ ಮಾರುಕಟ್ಟೆಯಲ್ಲಿ 10 ವಿಧದ ಉಪ್ಪು ಹಾಗೂ ಐದು ವಿಧದ ಸಕ್ಕರೆ ಖರೀದಿಸಿ ಪರಿಶೀಲಿಸಿದ ನಂತರ ಟಾಕ್ಸಿಕ್ ಲಿಂಕ್ ಸಂಘಟನೆಯು ಈ ಕುರಿತು ವರದಿ ರೂಪಿಸಿದೆ. ಚಿಕ್ಕ ಹಾಗೂ ದೊಡ್ಡ, ಪ್ಯಾಕ್ ಮಾಡಿದ ಮತ್ತು ಪ್ಯಾಕ್ ರಹಿತ ಸೇರಿದಂತೆ ಎಲ್ಲಾ ರೀತಿಯಲ್ಲಿ ಮಾರಾಟವಾ ಗುವ ಸಕ್ಕರೆ ಹಾಗೂ ಉಪ್ಪುಗಳಲ್ಲಿ ಮೈಕ್ರೋ ಪ್ಲಾಸ್ಟಿಕ್ ಅಂಶ ಕಂಡು ಬಂದಿದೆ. ಇವುಗಳ ಗಾತ್ರ 0.1 ಮಿ.ಮೀ.ನಿಂದ 5 ಮಿ.ಮೀ.ವರೆಗೆ ಇದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

## 'ಧರಾಮ' ಹಳೆ ವಿದ್ಯಾರ್ಥಿಗಳಿಗೆ ಸದಸ್ಯತ್ವಕ್ಕೆ ಆಹ್ವಾನ

ದಾವಣಗೆರೆ, ಆ.13- ನಗರದ ಧರಾಮ ವಿಜ್ಞಾನ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಸಹಕಾರ ನೀಡುವಂತೆ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ವಿವರಕ್ಕೆ ಮೊ: 96113 90375, 9448551452, 9980282121 ಸಂಪರ್ಕಿಸಬಹುದು.


## ಪ್ರಥಮ ವರ್ಷದ ಪುಣ್ಯಸ್ಮರಣೆ



ಎಸ್.ವಿ. ಟೂರ್ಸ್ ಅಂಡ್ ಟ್ರಾವೆಲ್ಸ್ ಮಾಲೀಕರಾದ

**ಶ್ರೀ ವೀರಭದ್ರಪ್ಪ ಅಲಗೂರು (ಯಳವಾರ)**

ನೀವು ನಮ್ಮನ್ನಗಲಿ ಒಂದು ವರ್ಷವಾದರೂ ತಾವು ಹಾಕಿಕೊಟ್ಟ ದಾರಿಯಲ್ಲೇ ಮುನ್ನಡೆಯುತ್ತಿರುವ...

ದುಃಖತಪ್ತ ಕುಟುಂಬ ವರ್ಗದವರು

**ಪ್ರಕಾಶ್ ವಿ. ಅಲಗೂರು ಮತ್ತು ಸಹೋದರರು, ಸಹೋದರಿಯರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು.**

ಅಲಗೂರು ಪೇಂಟ್ಸ್, ಎಸ್.ವಿ. ಟೂರ್ಸ್ ಅಂಡ್ ಟ್ರಾವೆಲ್ಸ್, ಎಸ್.ವಿ.ಟಿ. ಟ್ರೇಡರ್ಸ್, ಗುಡ್ಡಿ ಬೀಡಾ ಸ್ಟಾಲ್, ಹದಡಿ ರಸ್ತೆ, ದಾವಣಗೆರೆ

ಮೊ : 94481 14919, 98441 58970, 74119 13202



## ಭಾವಪೂರ್ಣ ಶ್ರದ್ಧಾಂಜಲಿ



ದಿ. 10.08.2024ರ ಶನಿವಾರ ಬೆಳಗಿನ ಜಾವ 1.17ಕ್ಕೆ ನಿಧನರಾದ ದಾವಣಗೆರೆ ತಾಲ್ಲೂಕು, ಎಲೆಬೇತೂರು ಗ್ರಾಮದ ವಾಸಿ ಕಾಂಗ್ರೆಸ್ ಮುಖಂಡರು, ನಮ್ಮ ಸಂಘದ ನಿರ್ದೇಶಕರು, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು, ದಾವಣಗೆರೆ ಡಿಸಿಸಿ ಬ್ಯಾಂಕ್ ನಿರ್ದೇಶಕರೂ ಆದ

**ಬೇತೂರು ಬಿ. ಕರಿಬಸಪ್ಪ**

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೃತರ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಎಲೆಬೇತೂರು.**


ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ


## ಪ್ರೌಢಶಾಲಾ ಮಕ್ಕಳಿಗೆ ಕಿರುನಾಟಕ ಸ್ಪರ್ಧೆ

ದಾವಣಗೆರೆ, ಜೂ. 13 - ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ಹಾಗೂ ರಂಗ ನಿಕೇತನ ಕಲಾ ತಂಡ ಇವರ ಸಂಯುಕ್ತಾಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಕಿರುನಾಟಕ ಸ್ಪರ್ಧೆ (ಸ್ವಾತಂತ್ರ್ಯ ಹೋರಾಟಗಾರರ ಕುರಿತು) ಯನ್ನು ಇದೇ ದಿನಾಂಕ 18ರ ಭಾನುವಾರ ನಗರದ ರೋಟರಿ ಬಾಲ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ರೋಟರಿ ಕ್ಲಬ್, ದಾವಣಗೆರೆ ದಕ್ಷಿಣ ಅಧ್ಯಕ್ಷ ಕಿಶನ್ ತಿಳಿಸಿದ್ದಾರೆ.

ಸ್ಪರ್ಧೆಗೆ 8ನೇ ತರಗತಿಯಿಂದ 10ನೇ ತರಗತಿ ಒಳಗಿನ ಮಕ್ಕಳಿಗೆ ಮಾತ್ರ ಅವಕಾಶವಿದೆ ಎಂದು ಶ್ರೀಧರ್ (8880950372), ಎಂ.ಡಿ. ಗೌಸ್ (9731746164), ಕಿಶನ್ (9449577541), ಬ್ರಿಜೇಶ್ (6361014491) ತಿಳಿಸಿದ್ದಾರೆ.

## ತುಳಜಾಭವಾನಿ ದೇವಿಗೆ ಬೆಣ್ಣೆ ಅಲಂಕಾರ



ದಾವಣಗೆರೆ, ಆ. 13 -ಸ್ಥಳೀಯ ಕೆಟಿಜೆ ನಗರ 3ನೇ ಮುಖ್ಯ ರಸ್ತೆ, 11ನೇ ತಿರುವಿನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಮಂಗಳವಾರ ಶ್ರೀ ದೇವಿಗೆ ಬೆಣ್ಣೆ ಅಲಂಕಾರ ಮಾಡಿ, ವಿಶೇಷ ಪೂಜೆ ಸಲ್ಲಿಸಲಾಯಿತು.

## 19ಕ್ಕೆ ಋಗ್ವೇದ, ಯಜುರ್ವೇದ ನಿತ್ಯ ಮತ್ತು ನೂತನ ಉಪಾಕರ್ಮ

ದಾವಣಗೆರೆ, ಆ. 13 - ಶ್ರೀ ಶಂಕರ ಸೇವಾ ಸಂಘದ ಆಶ್ರಯದಲ್ಲಿ ಇದೇ ದಿನಾಂಕ 19ರ ಸೋಮವಾರ ಬೆಳಿಗ್ಗೆ 6 ರಿಂದ ಋಗ್ವೇದ ಮತ್ತು ಯಜುರ್ವೇದ ನಿತ್ಯ ಮತ್ತು ನೂತನ ಉಪಕರ್ಮವನ್ನು ಬೆಳಿಗ್ಗೆ 6 ರಿಂದ ಪ್ರಾರಂಭ ಮಾಡಲಾಗುವುದು. ಆಸಕ್ತ ತ್ರಿಮತಸ್ಥ ಬ್ರಾಹ್ಮಣರು ಮುಂಚಿತವಾಗಿ ಹೆಸರನ್ನು ನೋಂದಾಯಿಸಿ ಹಾಗೂ ಸಮಯಕ್ಕೆ ಸರಿಯಾಗಿ ಹಾಜರಿರಲು ಕಾರ್ಯದರ್ಶಿ ಶ್ರೀನಿವಾಸ್ ಜೋಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : ಫೋ. 08192-221680, ಮೊ : 8296408068, 9964146122.

## ಹರಿಹರದ ರಸ್ತೆ ಅಪಘಾತದಲ್ಲಿ ಸಾವು

ಹರಿಹರ, ಆ. 13 - ನಗರದ ಗಾಂಧಿ ವೃತ್ತದ ಬಳಿಯ ಹರಪನಹಳ್ಳಿ ರಸ್ತೆಯಲ್ಲಿ ಮೊನ್ನೆ ಭಾನುವಾರ ಮಧ್ಯರಾತ್ರಿ ನಡೆದ ರಸ್ತೆ ಅಪಘಾತದಲ್ಲಿ ಓರ್ವ ಯುವಕ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿದೆ.

ಸ್ಥಳೀಯ ಬಾಪೂಜಿ ಶಾಲೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದ ಕೊಟ್ರೇಶ ಹೆಚ್. ಅವರ ಮಗ ಮನೋಜ್ ಕೆ. ಮನುಗುದ್ರಿ ಮೃತ ಯುವಕ.

ದಾವಣಗೆರೆ ಕಡೆಯಿಂದ ಗಾಂಧಿ ವೃತ್ತದ ಮೂಲಕ ಬಂದ ಬೈಕ್ ಹರಪನಹಳ್ಳಿ ರಸ್ತೆ ಪಕ್ಕ ಪಾರ್ಕಿಂಗ್ ಸ್ಥಳದಲ್ಲಿ ಇಟ್ಟಿದ್ದ ಬ್ಯಾರಿಕೇಡ್‌ಗೆ ಡಿಕ್ಕಿಯಾಗಿ ನೆಲಕ್ಕೆ ಬಿದ್ದಿದ್ದು, ಹಿಂಬದಿ ಸವಾರನಾಗಿದ್ದ ಮನೋಜ್ ತಲೆಗೆ ತೀವ್ರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬೈಕ್ ಚಾಲನೆ ಮಾಡುತ್ತಿದ್ದ ಪ್ರಸನ್ನ ಎನ್.ಕೆ. ಗಾಯಗೊಂಡಿದ್ದು ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ಮನೋಜ್‌ನನ್ನು ಸ್ನೇಹಿತ ಪ್ರಸನ್ನ ತನ್ನ ಹುಟ್ಟು ಹಬ್ಬಕ್ಕೆಂದು ಭಾನುವಾರ ಮಧ್ಯಾಹ್ನ ಕರೆದುಕೊಂಡು ಹೋಗಿದ್ದು, ತಡರಾತ್ರಿ ಬರುವಾಗ ಅಪಘಾತವಾಗಿದೆ ಎಂದು ಮನೋಜ್ ತಂದೆ ಕೊಟ್ರೇಶ್ ದೂರಿನಲ್ಲಿ ವಿವರಿಸಿದ್ದಾರೆ. ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಅಂಡಾಣು ದಾನ ಮಾಡಿದವರಿಗೆ ಮಕ್ಕಳ ಮೇಲೆ ಹಕ್ಕಿಲ್ಲ : ಹೈಕೋರ್ಟ್

ಮುಂಬೈ, ಆ. 13 - ವೀರ್ಯ ಹಾಗೂ ಅಂಡಾಣು ದಾನ ಮಾಡಿದವರಿಗೆ ಮಗುವಿನ ಮೇಲೆ ಯಾವುದೇ ಕಾನೂನು ಹಕ್ಕು ಇರುವುದಿಲ್ಲ ಹಾಗೂ ಈ ರೀತಿಯ ಮಕ್ಕಳಿಗೆ ತಾವು ಜೈವಿಕ ಪೋಷಕರು ಎಂದು ಹೇಳಲು ಬರುವುದಿಲ್ಲ ಎಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿದೆ.

ತನ್ನ ಐದು ವರ್ಷದ ಅವಳಿ ಹೆಣ್ಣು ಮಕ್ಕಳನ್ನು ಭೇಟಿ ಮಾಡಲು ಅನುಮತಿ ನೀಡಬೇಕು ಎಂದು 42 ವರ್ಷದ ಮಹಿಳೆ ನೀಡಿದ್ದ ಮನವಿಯ ಕುರಿತು ವಿಚಾರಣೆ ನಡೆಸಿದ ನಂತರ ಹೈಕೋರ್ಟ್ ಈ ನಿಲುವು ತಳೆದಿದೆ.

ಬಾಡಿಗೆ ತಾಯ್ತನದ ಮೂಲಕ ತನಗೆ ಅವಳಿ ಹೆಣ್ಣು ಮಕ್ಕಳಾಗಿದ್ದರು. ಈಗ ಮಕ್ಕಳು ತನ್ನ ಪತಿ ಹಾಗೂ ತಂಗಿಯ ಜೊತೆ ಇದ್ದಾರೆ. ಈ ಮಕ್ಕಳ ಜನನಕ್ಕೆ ತಂಗಿಯಿಂದ ಅಂಡಾಣು ದಾನ ಪಡೆದಿರುವ ಕಾರಣ ಪತ್ನಿಗೆ ಯಾವುದೇ ಹಕ್ಕಿಲ್ಲ ಎಂದು ಪತಿ ಹೇಳಿದ್ದಾರೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಈ ಬಗ್ಗೆ ತೀರ್ಪು ನೀಡಿರುವ ನ್ಯಾಯಮೂರ್ತಿ ಮಿಲಿಂದ್ ಜಾಧವ್ ಅವರ ಏಕಸದಸ್ಯ ಪೀಠ, ದಾನ ಮಾಡಿರುವ ತಂಗಿಗೆ ಅವಳಿ ಮಕ್ಕಳ ಮೇಲೆ ಯಾವುದೇ ಹಕ್ಕಿಲ್ಲ. ಸ್ವಯಂ ಪ್ರೇರಿತವಾಗಿ ವೀರ್ಯ ಇಲ್ಲವೇ ಅಂಡಾಣು ದಾನ ಮಾಡಿರುವವರು ತಾವು ಮಕ್ಕಳ ಜೈವಿಕ ಪೋಷಕರು ಎಂದು ಹೇಳಲು ಬರುವುದಿಲ್ಲ ಎಂದಿದ್ದಾರೆ.

## ಬಾಂಗ್ಲಾ ಹಣದುಬ್ಬರ 12 ವರ್ಷಗಳಲ್ಲೇ ಅತಿ ಹೆಚ್ಚು

ಢಾಕಾ, ಆ. 13 - ಕಳೆದ ಜುಲೈ ತಿಂಗಳಲ್ಲಿ ಬಾಂಗ್ಲಾ ದೇಶದಲ್ಲಿ ಹಣದುಬ್ಬರ 12 ವರ್ಷಗಳಲ್ಲೇ ಅತಿ ಹೆಚ್ಚಿನ ಶೇ.11.66ರ ಹಂತಕ್ಕೆ ತಲುಪಿದೆ. ಮೀಸಲಾತಿ ವ್ಯವಸ್ಥೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ನಡೆಸಿದ ಹೋರಾಟ ಹಾಗೂ ಬಾಂಗ್ಲಾದೇಶದ ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರ ಪದಚ್ಯುತಿಯ ನಡುವೆ ಈ ಬೆಳವಣಿಗೆಯಾಗಿದೆ.

ಜೂನ್ ತಿಂಗಳಲ್ಲಿ ಹಣದುಬ್ಬರ ಪ್ರಮಾಣ ಶೇ. 9.72ರಷ್ಟಿತ್ತು ಎಂದು ಬಾಂಗ್ಲಾದೇಶ ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯಲ್ಲಿ ತಿಳಿಸಲಾಗಿದೆ. ಜುಲೈ ತಿಂಗಳಲ್ಲಿ ಆಹಾರ ಹಣದುಬ್ಬರ ದಾಖಲೆಯ ಶೇ. 14.10 ಹಾಗೂ ಆಹಾರೇತರ ಹಣದುಬ್ಬರ ಶೇ. 9.68ರಷ್ಟಿದೆ.

# ಸ್ವಾತಂತ್ರ್ಯೋತ್ಸವ ಸಂಭ್ರಮ : ಹರ್ ಘರ್ ತಿರಂಗಾ ಅಭಿಯಾನ



### ವಿದ್ಯಾರ್ಥಿಗಳಿಗೆ ಸ್ಪರ್ಧೆ, ಸೈಕಲ್ ಜಾಥಾ, ತಿರಂಗಾ ಮ್ಯಾರಥಾನ್

### ಗ್ಲಾಸ್‌ಹೌಸ್‌ನಲ್ಲಿ ಇಂದು ಮತ್ತು ನಾಳೆ ಸಂಗೀತ ಕಾರಂಜಿ

ದಾವಣಗೆರೆ, ಅ. 13 - ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ 'ಹರ್ ಘರ್ ತಿರಂಗಾ' ಅಭಿಯಾನದ ಅನ್ವಯ ನಾಳೆ ದಿನಾಂಕ 14 ಹಾಗೂ 15ರಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲಾ - ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಪ್ರಬಂಧ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಹೇಳಿದರು.

ಎಲ್ಲ ತಾಲ್ಲೂಕುಗಳಲ್ಲಿ ತಿರಂಗಾ ಯಾತ್ರೆ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು, ಸಾರ್ವಜನಿಕರು, ಸಂಘ-ಸಂಸ್ಥೆಗಳ ಸದಸ್ಯರು ಭಾಗವಹಿಸಲಿದ್ದಾರೆ ಎಂದರು.

ನಾಳೆ ದಿನಾಂಕ 14ರ ಬುಧವಾರ ಬೆಳಿಗ್ಗೆ 6.30ಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಜಿಲ್ಲಾಡಳಿತ ಭವನದಿಂದ ಪಿ.ಬಿ.ರಸ್ತೆ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣದವರೆಗೆ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ.

ಸಂಜೆ 4.30ಕ್ಕೆ ಹೈಸ್ಕೂಲ್ ಮೈದಾನದಿಂದ ಜಿಲ್ಲಾ ಕ್ರೀಡಾಂಗಣದವರೆಗೆ ತಿರಂಗಾ ಮ್ಯಾರಥಾನ್ ಆಯೋಜಿಸಲಾಗಿದೆ ಎಂದು ತಿಳಿಸಿದರು.

ರಾಷ್ಟ್ರಧ್ವಜದೊಂದಿಗಿನ ಸೆಲ್ಫಿ ಚಿತ್ರವನ್ನು https://harghartiranga.com ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಎಲ್ಲಾ ತಾಲ್ಲೂಕುಗಳಲ್ಲೂ ಸೆಲ್ಫಿ ಪಾಯಿಂಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಎಲ್ಲ ವಿದ್ಯಾರ್ಥಿ ನಿಲಯಗಳಲ್ಲಿ ಸಾಂಸ್ಕೃತಿಕ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಹೇಳಿದರು.

ತೋಟಗಾರಿಕೆ ಇಲಾಖೆಯಿಂದ ನಗರದ ಗ್ಲಾಸ್‌ಹೌಸ್‌ನಲ್ಲಿ ಆ.13ರಿಂದ 15ರ ವರೆಗೆ ಪ್ರತಿ ದಿನ ಸಂಜೆ 5 ಗಂಟೆಗೆ ಸಂಗೀತ ಕಾರಂಜಿ ಆಯೋಜಿಸಲಾಗಿದೆ. ಕೆಎಸ್‌ಆರ್‌ಟಿಸಿ ವತಿಯಿಂದ 400ಕ್ಕೂ ಅಧಿಕ ಬಸ್‌ಗಳ ಮೇಲೆ ಹರ್ ಘರ್ ತಿರಂಗಾ ಅಭಿಯಾನದ ಪೋಸ್ಟರ್ ಅಂಟಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಬಿ. ಇಟ್ನಾಳ್, ಗ್ರಾ.ಪಂ.ಗಳ ವ್ಯಾಪ್ತಿಯಲ್ಲೂ 'ಹರ್ ಘರ್ ತಿರಂಗಾ' ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಗ್ರಾ.ಪಂ. ಗ್ರಂಥಾಲಯಗಳಲ್ಲಿ ತ್ರಿವರ್ಣ ಧ್ವಜ ಮತ್ತು ಬ್ಯಾಡ್ಜ್‌ಗಳನ್ನು ತಯಾರಿಸುವ ಚಟುವಟಿಕೆ ನಡೆಯುತ್ತಿದೆ.

'ಸಂವಿಧಾನ ಓದು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಾಡಿದ್ದು ದಿನಾಂಕ 15ರ ಗುರುವಾರ ಜಿಲ್ಲೆಯ ಅಮೃತ ಸರೋವರಗಳ ದಡದಲ್ಲಿ ಧ್ವಜಾರೋಹಣ ಮಾಡಲಾಗುವುದು ಎಂದರು.

ಜಿಲ್ಲೆಯ 24 ಪೊಲೀಸ್ ಠಾಣೆಗಳಲ್ಲೂ ರಾಷ್ಟ್ರಧ್ವಜ ಹಾರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ನಾಗರಿಕರು ಧ್ವಜ ಸಂಹಿತೆಯನ್ನು ಪಾಲಿಸಬೇಕು ಎಂದು ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಸುದ್ದಿಗೋಷ್ಠಿಯಲ್ಲಿದ್ದರು.

### ಮೂಲಭೂತ ಸೌಲಭ್ಯದ ನಂತರ ತಾಲ್ಲೂಕು ಕಚೇರಿ ಸ್ಥಳಾಂತರ : ಡಿಸಿ

ಗಡಿಯಾರ ಕಂಬದ ಬಳಿ ನಿರ್ಮಿಸಲಾಗಿರುವ ನೂತನ ತಾಲ್ಲೂಕು ಕಚೇರಿ ಕಟ್ಟಡಕ್ಕೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ನಂತರ ತಾಲ್ಲೂಕು ಕಚೇರಿ ಸ್ಥಳಾಂತರಗೊಳಿಸ ಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

ಹೊಸ ಕಟ್ಟಡದಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಅದಕ್ಕಾಗಿ 80 ಲಕ್ಷ ರೂ. ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಕೋರಲಾಗಿದೆ. ಹಣ ಬಿಡುಗಡೆಯಾದ ಒಂದು ತಿಂಗಳೊಳಗೆ ಕಚೇರಿ ಸ್ಥಳಾಂತರಿಸಲಾಗುವುದು ಎಂದು ಹೇಳಿದರು.

ಕಟ್ಟಡ ನಿರ್ಮಾಣವಾಗಿ ಒಂದೂವರೆ ವರ್ಷವಾಗಿದ್ದು, ನಿರ್ವಹಣೆಯಾಗಿಲ್ಲ. ಕಟ್ಟಡದಲ್ಲಿ ಸಣ್ಣಪುಟ್ಟ ದುರಸ್ತಿ ಕಾರ್ಯಗಳು ಆಗಬೇಕಿದೆ. ಲೋಪಗಳ ಬಗ್ಗೆ ಗುತ್ತಿಗೆದಾರನಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ ಎಂದೂ ಅವರು ತಿಳಿಸಿದರು.

ಭದ್ರಾ ಅಚ್ಚುಕಟ್ಟಿನ ಕೊನೆಯ ಭಾಗಕ್ಕೆ ನೀರು ತಲುಪದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಉದ್ಯೋಗ ಖಾತ್ರಿ ಯೋಜನೆಯಡಿ 630 ಕಿ.ಮೀ. ಉಪ ಕಾಲುವೆಗಳ ಹೂಳೆತ್ತಲಾಗಿದೆ. ಆದರೆ, ಮುಖ್ಯ ನಾಲೆಗಳಲ್ಲಿ ಗಿಡಗಂಟಿಗಳು ಬೆಳೆದಿವೆ. ಭದ್ರಾ ಇಂಜಿನಿಯರ್‌ಗಳ ಸಭೆ ಕರೆದು ಈ ಬಗ್ಗೆ ನಿರ್ದೇಶನ ನೀಡಲಾಗಿದೆ ಎಂದರು.

# ಅರಣ್ಯ ಇಂಗು ಗುಂಡಿ, ಸಸಿಗಳಲ್ಲಿ ಕೋಟಿಗಟ್ಟಲೆ ಅಕ್ರಮ



### ತಾ.ಪಂ. ಕೆ.ಡಿ.ಪಿ. ಸಭೆಯಲ್ಲಿ ಶಾಸಕ ಬಸವಂತಪ್ಪ ತರಾಟೆ

ದಾವಣಗೆರೆ, ಆ. 13 - ಅರಣ್ಯ ಇಲಾಖೆಯ ಇಂಗು ಗುಂಡಿ ಹಾಗೂ ಸಸಿ ನೆಡುವ ಕಾಮಗಾರಿಗಳಲ್ಲಿ ಕೋಟಿಗಟ್ಟಲೆ ಅಕ್ರಮ ನಡೆದಿದೆ. ಇಲಾಖೆಯ ಕಾಮಗಾರಿಗಳ ಬಗ್ಗೆ ಕಳೆದ ಏಳು ತಿಂಗಳಿನಿಂದ ಮಾಹಿತಿ ಕೇಳಿದರೂ ಅಧಿಕಾರಿಗಳು ವಿವರ ನೀಡದೇ ನುಣುಚಿಕೊಳ್ಳುತ್ತಿದ್ದಾರೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ತಾಲ್ಲೂಕು ಪಂಚಾಯ್ತಿ ಮೊದಲ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರಣ್ಯ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ವರದಿ ನೀಡುವಂತೆ ಕಳೆದ ಜನವರಿಯಲ್ಲೇ ಕೇಳಿದ್ದೆ. ಇದುವರೆಗೂ ಮಾಹಿತಿ ನೀಡಿಲ್ಲ ಎಂದು ಶಾಸಕರು ಆಕ್ಷೇಪಿಸಿದರು.

ಹೆಬ್ಬಾಳು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೂರು ಇಂಗು ಗುಂಡಿಗಳನ್ನು ನಿರ್ಮಿಸಲಾಗಿದೆ. ಪ್ರತಿ ಇಂಗು ಗುಂಡಿಗೆ ಹತ್ತು ಲಕ್ಷ ರೂ.ಗಳಷ್ಟು ದುಬಾರಿ ವೆಚ್ಚ ತೋರಿಸಲಾಗಿದೆ. ನರಗನಹಳ್ಳಿ, ಹೆಬ್ಬಾಳು, ಆನಗೋಡು, ಗುಡಾಳು, ಹುಲಿಕಟ್ಟೆ ಪಂಚಾಯ್ತಿಗಳಲ್ಲಿ ಇಂಗು ಗುಂಡಿ ತೆರೆದಿರುವುದರ ಬಗ್ಗೆ ಕಾಮಗಾರಿಯ ಪರಿಶೀಲನೆ ನಡೆದಿಲ್ಲ ಎಂದರು. ಗಿಡಗಳಿಗಾಗಿ ರಸ್ತೆ ಬದಿ ಸಾವಿರಾರು ಗುಂಡಿ ತೆಗೆದಿರುವುದಾಗಿ ಲೆಕ್ಕದಲ್ಲಿ ಮಾತ್ರ ತೋರಿಸಲಾಗಿದೆ. ಇವುಗಳ ರಕ್ಷಣೆಗೆ ಸಿಬ್ಬಂದಿ ನೇಮಿಸಿಲ್ಲ. ಇವೆಲ್ಲವೂ ಹಾಳಾಗಿ ಹೋಗಿವೆ ಎಂದರು.

ಹೆಬ್ಬಾಳು ಬಳಿ 2023-24ರ ಸಾಲಿನಲ್ಲಿ ಹತ್ತು ಸಾವಿರ ಗಿಡಗಳನ್ನು ನೆಡಲಾಗಿದೆ ಎಂದು ಲೆಕ್ಕ ತೋರಿಸಲಾಗಿದೆ. ಆದರೆ, ಗಿಡಗಳು ಯಾವ ಮಟ್ಟಕ್ಕೆ ಬಂದಿವೆ ಎಂಬುದರ ಮಾಹಿತಿ ಇಲ್ಲ. ದುಡ್ಡು ಯಾರ ಜೇಬಿಗೆ ಹೋಯಿತು? ಪ್ರಗತಿ ನೋಡದೇ ಹಣ ಬಿಡುಗಡೆ ಮಾಡಲಾಗಿದೆ ಎಂದು ಶಾಸಕ ಬಸವಂತಪ್ಪ ಆಕ್ಷೇಪಿಸಿದರು.

ಅಗಸನಕಟ್ಟೆ - ಗುಡಾಳ್ ಮಾರ್ಗದಲ್ಲಿ ಕಳೆದ ಹತ್ತು ವರ್ಷಗಳಿಂದ ಪದೇ ಪದೇ ಗಿಡ ನೆಡುವುದಾಗಿ ತಿಳಿಸಲಾಗುತ್ತಿದೆ. ಒಂದೇ ಮಾರ್ಗದಲ್ಲಿ ಎಷ್ಟು ಬಾರಿ ಸಸಿ ನೆಡುತ್ತೀರಿ? ಈ ಎಲ್ಲ ಸಮಸ್ಯೆಗಳ ಹಿನ್ನೆಲೆಯಲ್ಲಿ ಮೂರು ವರ್ಷಗಳ ಕಾಮಗಾರಿ ಮಾಹಿತಿ ಕೇಳಿದರೆ ಇನ್ನೂ ಕೊಟ್ಟಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ತಾಲ್ಲೂಕು ಪಂಚಾಯ್ತಿ ಆಡಳಿತಾಧಿಕಾರಿ ಎಲ್.ಎ. ಕೃಷ್ಣನಾಯ್ಕ ಮಾತನಾಡಿ, ಅನುಪಾಲನಾ ವರದಿ ಸಲ್ಲಿಸದಿರುವುದು ಹಾಗೂ ಅಧಿಕಾರಿಗಳು ಕೆ.ಡಿ.ಪಿ. ಸಭೆಗೆ ಗೈರಾಗುವುದು ಕಂಡು ಬರುತ್ತಿದೆ. ಈ ವಿಷಯಗಳ ಬಗ್ಗೆ ಹೇಳಿಸಿಕೊಳ್ಳದೇ ಕಾರ್ಯ ನಿರ್ವಹಿಸಬೇಕು. ಬೆಳಗಾವಿ ಜಿಲ್ಲೆ ಈ ವಿಷಯದಲ್ಲಿ ಮಾದರಿಯಾಗಿದೆ. ಅಲ್ಲಿ ಅಧಿಕಾರಿಗಳು ಪಾರದರ್ಶಕವಾಗಿ ಹಾಗೂ ಸಮಯೋಚಿತವಾಗಿ ಕಾರ್ಯನಿರ್ವಹಿಸುವುದರಿಂದ ಕೆ.ಡಿ.ಪಿ. ಸಭೆ ಗಂಟೆಯಲ್ಲೇ ಪೂರ್ಣವಾಗುತ್ತಿದೆ ಎಂದು ಹೇಳಿದರು.

ವಿಕೋಪ ನಿರ್ವಹಣೆ ಕುರಿತು ಪಂಚಾಯ್ತಿಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಆದರೆ ಮಳೆ ಹಾನಿ, ಡೆಂಗ್ಯೂ ಸಮಸ್ಯೆ ಇತ್ಯಾದಿಗಳ ಬಗ್ಗೆ ಮಾಹಿತಿ ಕೇಳಿದರೆ, ಮೂರು ಪಂಚಾಯ್ತಿಗಳು ಮಾತ್ರ ಸಲ್ಲಿಸಿವೆ ಎಂದು ತಹಶೀಲ್ದಾರ್ ಎಂ.ಬಿ.ಅಶ್ವತ್ಥ್ ಆಕ್ಷೇಪಿಸಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯ್ತಿ ಸಿಇಒ ರಾಮಭೋವಿ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಪೋಕ್ಸೋಗೆ ಬೇಕು ಇನ್ನೊಂದು ಜೈಲು!

ಕಾನೂನಿನ ಅರಿವಿಲ್ಲದೇ ಶಾಲೆ ಹಾಗೂ ಕಾಲೇಜು ಹಂತದಲ್ಲಿನ ಯುವಕ - ಯುವತಿಯರು ಪೋಕ್ಸೋ ಪ್ರಕರಣಗಳಲ್ಲಿ ಸಿಲುಕುತ್ತಿದ್ದಾರೆ. ಇದರಿಂದಾಗಿ ಹೆಣ್ಣು ಮಕ್ಕಳು ಮನೆಯಲ್ಲಿ ಹಾಗೂ ಹುಡುಗರು ಜೈಲಿನಲ್ಲಿರುವಂತಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ವಿಷಾದಿಸಿದ್ದಾರೆ.

ಪ್ರತಿ ಪೊಲೀಸ್ ಠಾಣೆಯಲ್ಲಿ 7-8 ಪೋಕ್ಸೋ ಪ್ರಕರಣಗಳಿವೆ. ಪ್ರತಿದಿನ ಠಾಣೆಯಲ್ಲಿ ಪೋಕ್ಸೋ ಪ್ರಕರಣಗಳು ದಾಖಲಾಗುತ್ತಿವೆ. ಜೈಲು ತುಂಬಾ ಪೋಕ್ಸೋ ಪ್ರಕರಣದ ಹುಡುಗರಿದ್ದಾರೆ ಎಂದವರು ಹೇಳಿದರು.

ಪೋಕ್ಸೋ ಕಾಯ್ದೆಯ ಬಗ್ಗೆ ಶಾಲೆ ಹಾಗೂ ಕಾಲೇಜು ಹಂತದಲ್ಲಿ ಅರಿವು ಮೂಡಿಸಬೇಕು. ಆಗ ಮಾತ್ರ ಜೈಲು ಖಾಲಿಯಾಗುತ್ತದೆ. ಇಲ್ಲದಿದ್ದರೆ ಇನ್ನೊಂದು ಜೈಲು ಬೇಕಾಗಲಿದೆ ಎಂದು ಶಾಸಕ ಬಸವಂತಪ್ಪ ಹೇಳಿದರು. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

### ಕಟಿಂಗ್ ಮೇಲಿರಲಿ ಕಣ್ಣು!

ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಗಳ ಗುರುತು ಪತ್ತೆಗಾಗಿ ನಡೆಸುವ ಪರೇಡ್‌ನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯ ಚಿತ್ರ ವಿಚಿತ್ರ ಕಟಿಂಗ್ ಮಾಡಿಸಿಕೊಂಡ ಹದಿಹರೆಯದವರು ಕಂಡು ಬಂದಿದ್ದಾರೆ ಎಂದು ತಹಶೀಲ್ದಾರ್ ಎಂ.ಬಿ.ಅಶ್ವತ್ಥ್ ತಿಳಿಸಿದರು.

ಶಾಲೆಯ ಶಿಸ್ತು ಧಿಕ್ಕರಿಸುವಂತೆ ಕೆಲ ವಿದ್ಯಾರ್ಥಿಗಳು ಕಟಿಂಗ್ ಮಾಡಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ತಿಳಿ ಹೇಳುವ ಶಿಕ್ಷಕರ ಮೇಲೆ ದಬಾಯಿಸುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಇವರಿಗೆ ಕೌನ್ಸೆಲಿಂಗ್ ಮಾಡಿಸಲು ಹಾಗೂ ಸರಿಯಾದ ದಾರಿ ತೋರಿಸಲು ಶಿಕ್ಷಣ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು.

### ಬಾತಿ ಬಿಟ್ಟ ಹೆಗಡೆ ನಗರ ವಾಸಿಗಳು

ಹೆಗಡೆ ನಗರದ ನಿವಾಸಿಗಳನ್ನು ದೊಡ್ಡಬಾತಿ ಬಳಿಯ ಆವರಗೊಳ್ಳಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ, ಮಳೆಗಾಲದ ಹಿನ್ನೆಲೆಯಲ್ಲಿ ತಾತ್ಕಾಲಿಕ ಶೆಡ್‌ಗಳಲ್ಲಿ ಇರಲಾಗದು ಎಂದು ಜನರು ಅಲ್ಲಿಂದ ಬೇರೆಡೆ ತೆರಳಿದ್ದಾರೆ. ಹೀಗಾಗಿ ಅಲ್ಲಿನ ಶೆಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂಗನವಾಡಿಯನ್ನು ನಿಜಲಿಂಗಪ್ಪ ಬಡಾವಣೆಗೆ ವರ್ಗಾಯಿಸಲಾಗುವುದು ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

# ವಿಶೇಷ ಕಾಯ್ದೆಗಳಲ್ಲೂ 'ಜಾಮೀನು ನಿಯಮ, ಜೈಲು ಅಪವಾದ'



ನವದೆಹಲಿ, ಆ. 13 - ಅಕ್ರಮ ಚಟುವಟಿಕೆ ತಡೆ ಕಾಯ್ದೆ ರೀತಿಯ ವಿಶೇಷ ಕಾಯ್ದೆಗಳಲ್ಲೂ ಸಹ 'ಜಾಮೀನು ನಿಯಮ, ಜೈಲು ಅಪವಾದ' ಎಂಬ ಕಾನೂನು ತತ್ವ ಪಾಲಿಸಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಆಗಸ್ಟೈನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದ್ದು, ಅರ್ಹ ಪ್ರಕರಣಗಳಲ್ಲಿ ಜಾಮೀನು ನಿರಾಕರಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಹೇಳಿದೆ.

ಪ್ರಾಸಿಕ್ಯೂಷನ್ ಮಾಡಿರುವ ಆರೋಪಗಳು ಗಂಭೀರವೇ ಆಗಿರಬಹುದು, ಆದರೆ ಕಾನೂನಿಗೆ ಅನುಗುಣವಾಗಿ ಜಾಮೀನು ನಿರ್ಧರಿಸುವುದು ನ್ಯಾಯಾಲಯಗಳ ಕರ್ತವ್ಯವಾಗಿದೆ ಎಂದು ಸುಪ್ರೀಂಕೋರ್ಟ್ ಪೀಠ ಹೇಳಿದೆ.

ಜಲಾಲುದ್ದೀನ್ ಖಾನ್ ಎಂಬುವವರ ವಿರುದ್ಧ ಅಕ್ರಮ ಚಟುವಟಿಕೆ ತಡೆ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಲಾಗಿತ್ತು. ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿ.ಎಫ್.ಐ.) ಸಂಘಟನೆಯ ಸದಸ್ಯರಿಗೆ ಮನೆ ಬಾಡಿಗೆಗೆ ನೀಡಿದ ಆರೋಪದ ಮೇಲೆ ಖಾನ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಉಗ್ರವಾದಿ ಚಟುವಟಿಕೆಗಳನ್ನು ನಡೆಸಲು ಹಾಗೂ ಭಯದ ವಾತಾವರಣ ಸೃಷ್ಟಿಸಲು ಮತ್ತು ದೇಶದ ಐಕ್ಯತೆಗೆ ಧಕ್ಕೆ ತರಲು ಅಪರಾಧಿಕ ಸಂಚು ನಡೆಸಲಾಗಿತ್ತು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ ಪ್ರಕರಣ ದಾಖಲಿಸಿತ್ತು.

ಖಾನ್ ಪಾಟ್ನಾದ ತನ್ನ ನಿವಾಸವನ್ನು ಹಿಂಸಾತ್ಮಕ ಚಟುವಟಿಕೆಗಳ ನಡೆಸುವವರಿಗಾಗಿ ಬಾಡಿಗೆಗೆ ಕೊಟ್ಟಿದ್ದ ಹಾಗೂ ಈ ಸಂಚಿನ ಸಭೆಗಳಲ್ಲಿ ಭಾಗವಹಿಸಿದ್ದ ಎಂದು ಆರೋಪಿಸಲಾಗಿತ್ತು.

2022ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭೇಟಿ ನೀಡುವ ಸಂದರ್ಭದಲ್ಲಿ ಹಿಂಸಾಚಾರ ನಡೆಸಲು ಸಂಚು ನಡೆಸಲಾಗಿತ್ತು. ಬಿಹಾರ ಪೊಲೀಸರಿಗೆ ಈ ಕುರಿತು ಸುಳಿವು ದೊರೆತ ನಂತರ ಖಾನ್ ನಿವಾಸದ ಮೇಲೆ ದಾಳಿ ನಡೆಸಲಾಗಿತ್ತು.

## ಪಾಕ್-ಆಫ್ಘಾನ್ ಗುಂಡಿನ ಚಕಮಕಿಯಲ್ಲಿ ಮೂವರ ಸಾವು

ಇಸ್ಲಮಾಬಾದ್, ಆ. 13 - ಪಾಕಿಸ್ತಾನ ಹಾಗೂ ಆಫ್ಘಾನ್ ತಾಲಿಬಾನ್ ಪಡೆಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಾಯುವ್ಯ ಗಡಿಯಲ್ಲಿ ನಡೆದ ಈ ಘಟನೆಯಲ್ಲಿ ಆಫ್ಘಾನ್ ನಾಗರಿಕರು ಮೃತರಾಗಿದ್ದಾರೆ.

ಚಕಮಕಿ ನಡೆದ ನಂತರ ವ್ಯಾಪಾರ ಹಾಗೂ ಸಂಚಾರಕ್ಕೆ ಅಡ್ಡಿಯಾಗಿದೆ.

ಇದು ಉಭಯ ದೇಶಗಳ ನಡುವಿನ ಪ್ರಮುಖ ಮಾರ್ಗ ಹೊಂದಿರುವ ಗಡಿಯಾಗಿದೆ. ಘಟನೆಯ ನಂತರ ಗಡಿಯಲ್ಲಿರುವ ಸಾವಿರಾರು ಜನರು ಪಲಾಯನ ಮಾಡಿದ್ದಾರೆ.

### ಕೆ.ಐ.ಎ.ಡಿ.ಬಿ. ಜಮೀನು ವಶದಲ್ಲಿ ಅವ್ಯವಹಾರ ಆರೋಪ

## ಇಡಿ ದಾಳಿ, 1.5 ಕೋಟಿ ರೂ. ವಶ

ನವದೆಹಲಿ, ಆ. 13 - ಕೆ.ಐ.ಎ.ಡಿ.ಬಿ.(ಕರ್ನಾಟಕ ರಾಜ್ಯ ಕೈಗಾರಿಕೋದ್ಯಮ ಪ್ರದೇಶ ಅಭಿವೃದ್ಧಿ ಮಂಡಳಿ) ಜಮೀನು ವಶದಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ ಶೋಧ ಕಾರ್ಯಾಚರಣೆ ನಡೆಸಿದ್ದು 1.5 ಕೋಟಿ ನಗದು ಡಿಜಿಟಲ್ ಉಪಕರಣಗಳು ಹಾಗೂ ದಾಖಲೆಗಳನ್ನು ವಶಪಡಿಸಿಕೊಂಡಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣ ಹಾಗೂ ಐಐಟಿ ಧಾರವಾಡ ರೀತಿಯ ಯೋಜನೆಗಳಿಗೆ ಜಮೀನು ವಶಪಡಿಸಿಕೊಳ್ಳುವಾಗ ಅಕ್ರಮಗಳು ನಡೆದಿವೆ ಎಂದು ಆರೋಪಿಸಲಾಗಿತ್ತು.

ಆಗಸ್ಟ್ 9 ಹಾಗೂ 10 ರಂದು ಬೆಂಗಳೂರು ಮತ್ತು ಧಾರವಾಡ ಸೇರಿದಂತೆ ಹಲವೆಡೆ ದಾಳಿ ನಡೆಸಲಾಗಿತ್ತು. ಬೆಂಗಳೂರಿನಲ್ಲಿರುವ ಕೆಐಎಡಿಬಿ ಕೇಂದ್ರ ಕಚೇರಿ ಹಾಗೂ ಧಾರವಾಡದ ವಲಯ ಕಚೇರಿಗಳ ಮೇಲೂ ದಾಳಿ ನಡೆಸಲಾಗಿತ್ತು.

ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲಾಗಿತ್ತು. ಕೆಐಎಡಿಬಿ ಧಾರವಾಡದ ಮಾಜಿ ಜಮೀನು ವಶ ಅಧಿಕಾರಿ ವಿ.ಡಿ. ಸಜ್ಜನ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿತ್ತು.

ಅಧಿಕಾರಿಗಳು ಜಮೀನು ಬ್ರೋಕರ್‌ಗಳ ಜೊತೆ ಕೈಜೋಡಿಸಿ ಜಮೀನು ವಶದ ಪರಿಹಾರದ ಹೆಸರಿನಲ್ಲಿ ಏಳು ಜನರಿಗೆ 19.99 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಆದರೆ, ಇವರು ಈ ಹಿಂದೆಯೇ ಪರಿಹಾರ ಪಡೆದುಕೊಂಡಿದ್ದರು. ಪುನಃ ಹಣ ಬಿಡುಗಡೆ ಮಾಡಿ ಸರ್ಕಾರ ಬೊಕ್ಕಸಕ್ಕೆ ನಷ್ಟ ಮಾಡಲಾಗಿದೆ ಎಂದು ಆರೋಪಿಸಲಾಯಿತು. ಇದೇ ರೀತಿಯ ವಾಮ ಮಾರ್ಗದ ಮೂಲಕ ಸಜ್ಜನ್ ಅವಧಿಯಲ್ಲಿ 72.55 ಕೋಟಿ ರೂಪಾಯಿಗಳನ್ನು ಕಬಳಿಸಲಾಗಿದೆ ಎಂದು ದೂರಲಾಗಿತ್ತು.

## ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ ನೇರವಾಗಿ ಭಾಗವಹಿಸಲು ಅವಕಾಶ



ದಾವಣಗೆರೆ, ಆ. 13 - ಚಿಕ್ಕಮಗಳೂರು ಜಿಲ್ಲೆ ಕಡೂರು ಪಟ್ಟಣದ ಪುಟ್ಟಮ್ಮ ಬೆಂಕಿ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆಯು 5ನೇ ವರ್ಷದ ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ಸ್ಪರ್ಧೆಯು ಇದೇ ದಿನಾಂಕ 17 ಮತ್ತು 18 ರಂದು ನಡೆಯಲಿದೆ.

ದಾವಣಗೆರೆ ಜಿಲ್ಲೆಯಿಂದ ಎಲ್ಲಾ ಯೋಗ ಕ್ರೀಡಾಪಟುಗಳು ಮತ್ತು ನಗರದ ಎಲ್ಲಾ ಯೋಗ ಕೇಂದ್ರಗಳಲ್ಲಿರುವ ಆಸಕ್ತ ಯೋಗ ಕ್ರೀಡಾಪಟುಗಳು ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ಸ್ಪರ್ಧೆಯಲ್ಲಿ ನೇರವಾಗಿ ಭಾಗವಹಿಸಲು ಅರ್ಹತೆ ಇದೆ ಎಂದು ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಯೋಗಾಚಾರ್ಯ ಎನ್. ಪರಶುರಾಮ್ (9035551568) ತಿಳಿಸಿದ್ದಾರೆ.

## ಶೇಖ್ ಹಸೀನಾ ವಿರುದ್ಧ ಹತ್ಯೆ ಪ್ರಕರಣ



ಢಾಕಾ, ಆ. 13 - ಬಾಂಗ್ಲಾದೇಶದ ಪದಚ್ಯುತ ಪ್ರಧಾನಮಂತ್ರಿ ಶೇಖ್ ಹಸೀನಾ ಹಾಗೂ ಇತರ ಆರು ಜನರ ವಿರುದ್ಧ ಹತ್ಯೆ ಪ್ರಕರಣ ದಾಖಲಿಸಲಾಗಿದೆ ಎಂದು ನ್ಯಾಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ತಿಂಗಳು ನಡೆದ ಹಿಂಸಾತ್ಮಕ ಪ್ರತಿಭಟನೆಗಳ ವೇಳೆ ದಿನಸಿ ಅಂಗಡಿ ಮಾಲೀಕರೊಬ್ಬರ ಸಾವಿಗೆ ಸಂಬಂಧಿಸಿದಂತೆ ಈ ಪ್ರಕರಣ ದಾಖಲಿಸಲಾಗಿದೆ. ಹಸೀನಾ ಸಂಪುಟದ ಇಬ್ಬರು ಮಾಜಿ ಹಿರಿಯ ಸಚಿವರು ಹಾಗೂ ವಜಾಗೊಂಡಿರುವ ಪೊಲೀಸ್ ಮುಖ್ಯಸ್ಥ ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ. ಹಸೀನಾ ಅವರು ಭಾರತಕ್ಕೆ ಪಲಾಯನ ಮಾಡಿದ್ದಾರೆ. ಅವರ ಇಬ್ಬರು ಸಚಿವರು ಸಹ ಗುಪ್ತವಾಗಿ ದೇಶ ತೆರೆದಿದ್ದಾರೆ ಎಂದು ಹೇಳಲಾಗುತ್ತಿದೆ. ಆರೋಪಿಗಳಾಗಿರುವ ಉಳಿದ ಪೊಲೀಸ್ ಅಧಿಕಾರಿಗಳ ಸುಳಿವು ಪತ್ತೆಯಾಗಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ.

ದೇಶಾದ್ಯಂತ ನಡೆದ ವ್ಯಾಪಕ ಹಿಂಸಾಚಾರದಲ್ಲಿ 500ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ಮೂರು ವಾರಗಳ ಕಾಲ ಹಿಂಸಾಚಾರ ನಡೆದಿತ್ತು.

## ಮಡಿವಾಳ ಸಮಾಜದಿಂದ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಆ.13- ಜಿಲ್ಲಾ ಮಡಿವಾಳ ಮಾಚಿದೇವ ಸಂಘದಿಂದ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದ್ದು, 2023-24ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.70ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳು ನಾಡಿದ್ದು ದಿನಾಂಕ 15ರೊಳಗೆ ಸ್ವವಿವರವುಳ್ಳ ಅರ್ಜಿಗಳನ್ನು ವಿನೋಬ ನಗರದಲ್ಲಿರುವ ಮಾಚಿದೇವ ಸಮುದಾಯ ಭವನದಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಎಂ.ನಾಗೇಂದ್ರಪ್ಪ-9448000077, ಆರ್.ಎನ್.ಧನಂಜಯ್-9844001462, ಸುರೇಶ್ ಎಂ.ಕೋಗುಂಡೆ- 98804 97271, ಸಿ.ಗುಡ್ಡಪ್ಪ- 8892624949, ಪಿ.ಮಂಜುನಾಥ್- 9980087033ಗೆ ಸಂಪರ್ಕಿಸಬಹುದು.

# ಕೇಂದ್ರ ಕೈಗಾರಿಕೆಗಳ ಅಭಿವೃದ್ಧಿಗೆ ರಾಜ್ಯದ ಅಸಹಕಾರ : ಹೆಚ್ಡಿಕೆ

ಬೆಂಗಳೂರು, ಅ. 13 - ಕೇಂದ್ರ ಸ್ವಾಮ್ಯದ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಪುನಃಶ್ಚೇತನಕ್ಕೆ ರಾಜ್ಯ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರ ಕೈಗಾರಿಕೆ ಮತ್ತು ಗಣಿ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ರಾಜ್ಯ ಮತ್ತು ಕೇಂದ್ರದ ಸಂಪನ್ಮೂಲ ಹೆಚ್ಚಿಸಿ ಉದ್ಯೋಗ ಸೃಷ್ಟಿಗೆ ನಾವು ಮಾಡುತ್ತಿರುವ ಎಲ್ಲಾ ಪ್ರಯತ್ನಗಳಿಗೆ ರಾಜ್ಯ ಸರ್ಕಾರ ಅಡ್ಡಿ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ನಾನುಕೇಂದ್ರಸಚಿವನಾಗಿಕಾರ್ಯನಿರ್ವಹಿಸುವುದೇ ಸಿದ್ದರಾಮಯ್ಯ ಸರ್ಕಾರಕ್ಕೆ ಇಷ್ಟ ಇದ್ದಂತಿಲ್ಲ. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಕುದುರೆಮುಖ ಹಾಗೂ ಹೆಚ್‌ಎಂಟಿ ಕಾರ್ಖಾನೆಗಳ ಪುನಃಶ್ಚೇತನಕ್ಕೆ ಅಲ್ಪಾವಧಿಯಲ್ಲೇ ನಮ್ಮ ಇಲಾಖೆ ಕಾರ್ಯಕ್ರಮ ರೂಪಿಸುತ್ತಿದ್ದಂತೆ, ರಾಜ್ಯ ಸರ್ಕಾರ ಅದರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಹೇಳಿದರು.

ಅಷ್ಟೇ ಅಲ್ಲ, ಕೇಂದ್ರ ಸ್ವಾಮ್ಯದ ಅಡಿ ಬರುವ ಕೈಗಾರಿಕೆಗಳ ನೂರಾರು ಎಕರೆ ಭೂಮಿಯನ್ನು ಅನ್ಯ ಮಾರ್ಗದಲ್ಲಿ ವಶಪಡಿಸಿಕೊಂಡು ಖಾಸಗಿ ಬಿಲ್ಡರ್‌ಗಳಿಗೆ ಸಹಾಯ ಮಾಡಲು ಹೊರಟಿದೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಒಬ್ಬರೇ ಒಬ್ಬ ಸಚಿವರು ಇದುವರೆಗೂ ನನ್ನನ್ನು ಭೇಟಿ ಮಾಡಿ, ಕರ್ನಾಟಕಕ್ಕೆ ಆಗಬೇಕಿರುವ ಕೆಲಸ ಮಾಡಿಕೊಡುವಂತೆ ಕೇಳಿಲ್ಲ. ಅವರು ಬರುವುದೂ ಬೇಡ, ನಿರುದ್ಯೋಗಿಗಳಿಗೆ ಉದ್ಯೋಗ ಕೊಡಲು ನಾನು ಹಾಕುವ ಯೋಜನೆಗಳಿಗೂ ಸಿದ್ದರಾಮಯ್ಯ ಸರ್ಕಾರ ಅಡ್ಡಿ ಉಂಟು ಮಾಡುತ್ತಿದೆ ಎಂದು ಆರೋಪಿಸಿದರು.

ಹಾಲಿ ಕೈಗಾರಿಕೆಗಳ ವಿಸ್ತರಣೆ ಮತ್ತು ಪುನಃಶ್ಚೇತನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎಷ್ಟು ಕೋಟಿ ರೂ.ಗಳನ್ನು ಬೇಕಾದರೂ ನೀಡಲು ಸಿದ್ಧರಿದ್ದಾರೆ, ಅದನ್ನು ಬಳಸಿಕೊಂಡು ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಮುಂದಾಗಿರುವುದನ್ನೂ ಇವರು ಸಹಿಸಿಕೊಳ್ಳುತ್ತಿಲ್ಲ ಎಂದರು. ಕೇಂದ್ರ ಸಚಿವನಾಗಿ ನಾಲ್ಕೈದು ದಿನದಲ್ಲೇ ಕುದುರೆಮುಖ ಕಂಪನಿಗೆ ಕೇಂದ್ರ ಸರ್ಕಾರದ ಆರ್ಥಿಕ ಗ್ಯಾರಂಟಿ ಕೇಳಿದ್ದೆ. ಆದರೆ, ರಾಜ್ಯ ಸರ್ಕಾರ, ಕುಮಾರ ಸ್ವಾಮಿ, ಪರಿಸರ ಹಾಳು ಮಾಡಲು ಹೊರಟಿದ್ದಾರೆ ಎಂದು ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತು.



ಇದೇ ಸಿದ್ದರಾಮಯ್ಯ ಸರ್ಕಾರ ಸಂಡೂರಿನ ದೇವದಾರದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿದ್ದಾರೆ. ನಾನು ಕೇಳಿದ ಪ್ರದೇಶಗಳಲ್ಲಿ ಮರಗಳಿಲ್ಲ, ನಾವು ಪರಿಸರ ಸಂರಕ್ಷಣೆಗಾಗಿ ಹಣ ನೀಡಿದರೂ ಸಮ್ಮತಿ ಕೊಡಲಿಲ್ಲ ಎಂದರು.

ಸರ್ಕಾರ ಇದೇ ರೀತಿ ತನ್ನ ಧೋರಣೆ ಮುಂದುವರೆಸಿದರೆ, ಸಾವಿರಾರು ಕುಟುಂಬಗಳು ಬೀದಿಗೆ ಬರಲಿವೆ, ಅಲ್ಲದೆ, ಎಚ್‌ಎಂಟಿ ಕಾರ್ಖಾನೆ ಭೂಮಿಯನ್ನು ಅರಣ್ಯ ಜಾಗವೆಂದು ವಶಪಡಿಸಿಕೊಳ್ಳಲು ಸಿದ್ದರಾಮಯ್ಯ ಸರ್ಕಾರ ಹೊಸ ನಖರಾ ಶುರು ಮಾಡಿದೆ ಎಂದು ಟೀಕಿಸಿದರು.

ಕಾರ್ಖಾನೆ 1964ರಲ್ಲೇ ಉಳುಮೆದಾರರಿಂದ ನೇರವಾಗಿ ಭೂಮಿ ಖರೀದಿಸಿದೆ, ಆದರೆ ಇದೀಗ, ಅಲ್ಲಿ ಮರಗಳು ಬೆಳೆದಿರುವ ನೂರಾರು ಎಕರೆ ಅರಣ್ಯ ಇಲಾಖೆಗೆ ಸೇರಿದ್ದು, ಅದನ್ನು ಸ್ವಾಧೀನಪಡಿಸಿಕೊಳ್ಳುವಂತೆ ಇಲ್ಲಿನ ಇಲಾಖಾ ಕಾರ್ಯದರ್ಶಿಗಳು ಪತ್ರ ಬರೆದಿದ್ದಾರೆ.

ನಾನು ಈ ಕಾರ್ಖಾನೆಗೆ ಭೇಟಿ ಕೊಟ್ಟೆ ಎಂಬ ಒಂದೇ ಕಾರಣಕ್ಕೆ ತನ್ನದಲ್ಲದ ಭೂಮಿಯನ್ನು ತನ್ನದೆಂದು ತಗಾದೆ ತೆಗೆದು ರಾಜ್ಯ ಸರ್ಕಾರ ಖಾಸಗಿಯವರಿಗೆ ನೀಡಲು ಹೊರಟಿದೆ. ಹೆಚ್‌ಎಂಟಿ ಭೂಮಿ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಗಾಗಲೇ ರಾಜ್ಯ ಸರ್ಕಾರಕ್ಕೆ ಕಪಾಳಮೋಕ್ಷ ಮಾಡಿದೆ. ಆದರೂ ಇವರು ಮತ್ತೆ ಈ ವಿಷಯದಲ್ಲಿ ಕೈಹಾಕುತ್ತಿದ್ದಾರೆ, ಕಾರ್ಖಾನೆ ವಿಚಾರ ನ್ಯಾಯಾಲಯದ ಮೆಟ್ಟಿಲು ಹತ್ತಲಿದೆ ಎಂದರು.

ನಾನು ಕೇಂದ್ರದಲ್ಲಿ ಮಂತ್ರಿಯಾದ ಮೇಲೆ ಕೆಲಸ ನಿರ್ವಹಣೆ ಮಾಡಲು ಬಿಡದೇ ರಾಜ್ಯ ಸರ್ಕಾರ ಯಾವ ರೀತಿ ನಡೆದುಕೊಳ್ಳುತ್ತಿದೆ ಎಂಬುದಕ್ಕೆ ಇದು ಉದಾಹರಣೆ. ಇವರು ಏನೇ ಅಸಹಾಕಾರ ತೋರಲಿ, ಪ್ರಧಾನಿ ಅವರ ಸಹಕಾರದಿಂದ ಕೇಂದ್ರ ಸ್ವಾಮ್ಯದ ಕೈಗಾರಿಕೆಗಳ ಅಭಿವೃದ್ಧಿ ಜೊತೆಗೆ ಉದ್ಯೋಗ ಸೃಷ್ಟಿಗೆ ಒತ್ತು ಕೊಡುವುದಾಗಿ ತಿಳಿಸಿದರು.

# ಸ್ವಾತಂತ್ರ್ಯೋತ್ಸವದ ಒಂದು ಅವಲೋಕನ

ನಮ್ಮ ಭವ್ಯ ಭಾರತದ ಸ್ವಾತಂತ್ರ್ಯ ಇತಿಹಾಸ ತುಂಬಾ ರೋಚಕ ಮತ್ತು ರೋಮಾಂಚನ. ಸತತ ಹೋರಾಟ, ತ್ಯಾಗ-ಬಲಿದಾನ, ನೂರಾರು ಚಳುವಳಿಗಳ ಪ್ರತಿಫಲವಾಗಿ 1947, ಆಗಸ್ಟ್ 15ರಂದು ಗಳಿಸಿದ ಸ್ವಾತಂತ್ರ್ಯ ಇತಿಹಾಸದ ಮೈಲಿಗಲ್ಲು, ಹಲವು ಧರ್ಮ-ಮತ, ಜಾತಿ, ಜನಾಂಗ, ಭಾಷೆ, ಸಂಸ್ಕೃತಿ, ಪ್ರಾಂತಗಳು, ವಿವಿಧತೆಗಳ ನಡುವೆ ಅಖಂಡತೆ ಸಾಧಿಸಿದ ಬಲಾಢ್ಯ ಒಕ್ಕೂಟ ರಾಷ್ಟ್ರ, ಜನಸಂಖ್ಯೆಯಲ್ಲಿ ದ್ವಿತೀಯ ಸ್ಥಾನ ಅತಿ ದೊಡ್ಡ ಪ್ರಜಾ ಪ್ರಭುತ್ವ ಎಂಬ ಹೆಗ್ಗಳಿಕೆ, ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ, ಆವಿಷ್ಕಾರಗಳು, ಸ್ಟಾರ್ಟ್‌ಆಪ್, ನವೋದ್ಯಮಗಳಲ್ಲಿ ಉದ್ಯಮಶೀಲತೆ, ಕ್ಷಿಪ್ರಗತಿಯ ಡಿಜಿಟಲೀಕರಣ, ಮಾಹಿತಿ ತಂತ್ರಜ್ಞಾನ ಬ್ಯಾಂಕೋದ್ಯಮ, ಶಿಕ್ಷಣ ಆರೋಗ್ಯ, ಕ್ರೀಡೆ, ವ್ಯಾಪಾರ-ವಾಣಿಜ್ಯ, ಕೃಷಿ, ಮೂಲ ಸೌಕರ್ಯಗಳು ಗ್ರಾಮೀಣಾಭಿವೃದ್ಧಿ ಮತ್ತು ಸೇವಾ ವಲಯಗಳಲ್ಲಿ ಗಮನಾರ್ಹ ಸಾಧನೆಯಿಂದಾಗಿ ವಿಶ್ವದ ಐದನೇ ದೊಡ್ಡ ಆರ್ಥಿಕತೆಯಾಗಿ ಜಾಗತೀಕ ಪ್ರಭಾವಿಶಾಲಿ ರಾಷ್ಟ್ರವಾಗಿ ವಿಶ್ವದ ಭೂಪಟದಲ್ಲಿ ಮಾತ್ರವಲ್ಲ, ಶ್ರೇಷ್ಠ ಪ್ರಗತಿಶೀಲ ರಾಷ್ಟ್ರವಾಗಿ ಮೂಡುತ್ತದೆ.

ನಮ್ಮ ಆರ್ಥಿಕಾಭಿವೃದ್ಧಿ ವೇಗ ತೀವ್ರಗೊಳಿಸಲು ಮತ್ತು ಸರ್ವಾಂಗೀಣ ಆರ್ಥಿಕ ಬೆಳವಣಿಗಾಗಿ ಸಮಗ್ರ ದೃಷ್ಟಿಕೋನವುಳ್ಳ ಆರ್ಥಿಕ, ಯೋಜನೆಗಳು ಬೇಕು. ನಮ್ಮ ದೇಶಕ್ಕೆ ನಮ್ಮ ದೇಶದ ಅಭಿವೃದ್ಧಿ ಮಾದರಿಯಾಗಬೇಕು. ಜಾಗತೀಕರಣದ ಅಂಧಾನು ಕರಣೆಯಿಂದ ಪರಾವಲಂಬಿಗಳಾಗುವುದು ಬೇಡ. ಭಾರತದ ಆರ್ಥಿಕಾಭಿವೃದ್ಧಿಗೆ ರಚನಾತ್ಮಕ, ಬೌದ್ಧಿಕ ಮತ್ತು ಆಂದೋಲನಾತ್ಮಕ ಪ್ರಯತ್ನಗಳು ಬೇಕು. ಪರಿಸರ-ಸಂರಕ್ಷಣೆ ಮತ್ತು ಸಂವರ್ಧನೆಯೊಂದಿಗೆ ಪ್ರಕೃತಿಯಾಧಾರಿತ ವಿಕಾಸವಾಗಬೇಕು. 'ಸಮೃದ್ಧ ಹಳ್ಳಿ ಸಮೃದ್ಧ ದೇಶ' ಎಂಬ ಪರಿಕಲ್ಪನೆ ಜೀವಂತಿಕೆ ಪಡೆಯಬೇಕು. ಕೃಷಿಯಧಾರಿತ ಕಸಬುಗಳು ವಿಸ್ತರಣೆಯೊಂದಿಗೆ ಸಮೃದ್ಧಿ ಮತ್ತು ಸಂಸ್ಕೃತಿಯ ಮಧ್ಯೆ ಸಮತೋಲನ ಕಾಪಾಡಬೇಕು. ಇದಕ್ಕಾಗಿ 7 E ತತ್ವಗಳನ್ನು ಅನಷ್ಟಾನಗೊಳಿಸಬೇಕು. ಶಿಕ್ಷಣ, ಉದ್ಯೋಗ, ಉದ್ಯಮಶೀಲತೆ, ದಕ್ಷತೆ, ಪರಿಸರ, ಸಮಾನತೆ, ನೈತಿಕತೆ, ಈ ಮೇಲಿನ ಎಲ್ಲಾ ತತ್ವಗಳಿಗೆ ಪ್ರತ್ಯೇಕ ಯೋಜನೆಗಳನ್ನು ರೂಪಿಸಿ, ಕಾಲಬದ್ಧತೆಯಲ್ಲಿ ಪಟ್ಟು ಹಿಡಿದು ಅನುಷ್ಠಾನಕ್ಕೆ ತರಬೇಕು ಮತ್ತು ಸಾರ್ವತ್ರಿಕ ಅನ್ವಯಗೊಳ್ಳಬೇಕು.

ಪ್ರಸ್ತುತ ದೇಶದ ಅಭಿವೃದ್ಧಿಗೆ ಭಯೋತ್ಪಾದನೆ, ನಕ್ಸಲಿಸಂ, ಭ್ರಷ್ಟಾಚಾರಗಳು, ಜಾತೀಯತೆ, ಸ್ವಜನ ಪಕ್ಷಪಾತ, ಕಾಲವಿಳಂಬ, ಇತರೆ ಮಾರಕಗಳಾಗಿವೆ. ದೇಶದ ಸಮಸ್ತ ಜನತೆ ದೇಶಾಭಿಮಾನ, ಸಮಾನತಾ ಮನೋಭಾವ, ಸದಾ ಕಾರ್ಯ ತತ್ಪರರಾಗುವ ಕ್ರಿಯಾಶೀಲತೆಗಳನ್ನು ಮೈಗೂಡಿಸಿಕೊಳ್ಳಬೇಕು. ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರಲಾಂಚನಗಳ ಬಗ್ಗೆ ಗೌರವ ಮತ್ತು ಇವುಗಳ ಆಶಯಗಳನ್ನು ತಿಳಿಸುವ ಅನಿವಾರ್ಯತೆ ಇದೆ ಇಂದು.

**ರಾಷ್ಟ್ರಗೀತೆ :** ಗುರುದೇವ ರವೀಂದ್ರನಾಥ್ ಠಾಗೋರ್ ಅವರು ಬರೆದ 'ಜನಗಣ ಮನ' ಗೀತೆಯನ್ನು ಜನವರಿ, 24 1950ರಂದು ಕೇಂದ್ರ ಸರ್ಕಾರ ರಾಷ್ಟ್ರಗೀತೆ ಎಂದು ಘೋಷಿಸಿತು. ರಾಷ್ಟ್ರಗೀತೆಯನ್ನು 46 ರಿಂದ 52 ಸೆಕೆಂಡ್‌ಗಳಿಗೆ ಮೀರದಂತೆ ಹಾಡಿ ಮುಗಿಸಬೇಕು.

**ನಮ್ಮ ರಾಷ್ಟ್ರಧ್ವಜ :**



ದೇಶದ ವಿಭಿನ್ನ ಜಾತಿ, ಧರ್ಮ, ಮತ, ಪಂಗಡ, ಸಂಸ್ಕೃತಿಯ ಜನರನ್ನು ಒಂದೇ ಧ್ವಜದಡಿಯಲ್ಲಿ ನಿಲ್ಲಿಸಿ, ದೇಶದ ಏಕತೆಯನ್ನು ಸಾರುವ ದಿವ್ಯ ಸಾಧನವೇ ನಮ್ಮ ರಾಷ್ಟ್ರಧ್ವಜ. ನಮ್ಮ ಪವಿತ್ರ ಭಾರತಾಂಬೆಯ ಕೀರ್ತಿಯು ಮುಗಿಲೆತ್ತರಕ್ಕೆ ಏರಲಿ, ಎಲ್ಲಕ್ಕಿಂತ ಶ್ರೇಷ್ಠವಾದ ರಾಷ್ಟ್ರದ ಧ್ಯೇಯಗಳು ಎಲ್ಲಕ್ಕಿಂತ ಎತ್ತರದಲ್ಲಿ ರಾರಾಜಿಸಲಿ ಎಂಬ ಸಂಕೇತವನ್ನು ನಾಲ್ಕು ದಿಕ್ಕುಗಳಿಗೂ ತಿಳಿಯಪಡಿಸುವುದೇ ನಮ್ಮ ರಾಷ್ಟ್ರಧ್ವಜವನ್ನು ಮೇಲಕ್ಕೆ ಹಾರಿಸುವ ಉದ್ದೇಶ.

ಭಾರತದ ಸ್ವಾತಂತ್ರ್ಯ ಪೂರ್ವ ಚಳುವಳಿಯಲ್ಲಿ ವಿವಿಧ ರೀತಿಯ ಧ್ವಜಗಳನ್ನು ಬಳಸಲಾಗುತ್ತಿತ್ತು. ಇಂದು ನಾವು ಬಳಸುತ್ತಿರುವ ತ್ರಿವರ್ಣ ಧ್ವಜ ಮೊದಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ಸೀಮಿತವಾಗಿದ್ದ ಈ ಧ್ವಜವನ್ನು ಆಂಧ್ರ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರ ಪಿಂಗಳಿ ವೆಂಕಯ್ಯನವರು ರೂಪಿಸಿದರು. ಪಿ. ವೆಂಕಯ್ಯನವರು 1916ರಿಂದ 1921ರ ನಡುವೆ 30 ರಾಷ್ಟ್ರಗಳ ಧ್ವಜಗಳ ಸಮಗ್ರ ಅಧ್ಯಯನ ಮಾಡಿ ಹಾಗೂ ರಾಷ್ಟ್ರನಾಯಕರ ಸಲಹೆಗಳನ್ನು ಪರಿಗಣಿಸಿ ರೂಪಿಸಿದ ಧ್ವಜವನ್ನು 1947, ಜುಲೈ 22ರಂದು ರಾಷ್ಟ್ರಧ್ವಜವನ್ನಾಗಿ ಘೋಷಿಸಲಾಯಿತು. ಇದನ್ನು ಶುದ್ಧ ಖಾದಿಯಿಂದಲೇ ತಯಾರಿಸಬೇಕು. ಕೇಸರಿ, ಬಿಳಿ, ಹಸಿರು ಬಣ್ಣಗಳ ಅಳತೆ ಸಮ ಪ್ರಮಾಣದಲ್ಲಿದ್ದು, ನೀಲಿ ಚಕ್ರವು ಹೆಚ್ಚು ಕಡಿಮೆ ಬಿಳಿ ಬಣ್ಣದ ಅಡ್ಡಗಲವಿದ್ದು, ಧ್ವಜದ ಉದ್ದ ಮತ್ತು ಅಗಲ 3:2ಪ್ರಮಾಣದಲ್ಲಿ ಇರತಕ್ಕದ್ದು.

**ರಾಷ್ಟ್ರಧ್ವಜದ ಬಣ್ಣಗಳು :**

**ಕೇಸರಿ ಬಣ್ಣ :** ಧೈರ್ಯ, ಪರಿತ್ಯಾಗ ಮತ್ತು ದೇಶದ ಒಳಿತಿಗಾಗಿ ಬಲಿದಾನಗಳ ಸಂಕೇತ,

**ಬಿಳಿ ಬಣ್ಣ :** ನಿತ್ಯವೂ ಸತ್ಯಶಾಂತಿಗಳೊಂದಿಗೆ ನಮ್ಮನ್ನು ಬೆಳಕಿನೆಡೆಗೆ ಕೊಂಡೊಯ್ಯುವ ಸತ್ಯಮಾರ್ಗದ ಸಂಕೇತ.

**ಹಸಿರು ಬಣ್ಣ :** ಹಸಿರು ಜೀವರಾಶಿಗಳನ್ನು ಅವಲಂಬಿಸಿರುವ ಮನುಷ್ಯ ಮತ್ತು ಭೂಮಿಯ ಸಂಬಂಧಗಳ ಸಂಕೇತ.

**ಅಶೋಕ ಚಕ್ರ :** ನೀಲಿ ಬಣ್ಣದ ಚಕ್ರವು ತಟಸ್ಥವಾಗಿರದೇ, ಚಲನೆಯಂತೆ ಜೀವಕಳೆಯಿಂದ ಇದ್ದು, ಸತ್ಯಧರ್ಮಗಳೊಂದಿಗೆ ಶಾಂತಿಯುತ ಬದಲಾವಣೆಗಳೊಂದಿಗೆ ಯಶಸ್ಸಿನಿಂದ ಮುನ್ನಡೆವ ಸಂಕೇತ.

ಚಕ್ರದಲ್ಲಿರುವ 24 ಅರಗಳು ನಮ್ಮ ದೇಶವನ್ನು 24 ಗಂಟೆಯಲ್ಲೂ ಸತತ ಪ್ರಗತಿ ಪಥದತ್ತ ಸಾಗಿಸುವ ಚಿಂತನೆಯ ಪ್ರತೀಕವಾಗಿದೆ.

**ರಾಷ್ಟ್ರಲಾಂಛನ :** ನಮ್ಮ ಜೀವನದ ಶ್ರೇಷ್ಠವಾದ ಮೌಲ್ಯವೇ ಧರ್ಮ, ಧರ್ಮದ ಮಹತ್ವವನ್ನು ಜಗತ್ತಿಗೆ ತಿಳಿಯ ಪಡಿಸುವುದೇ ಈ ಲಾಂಛನದ ಸಂಕೇತವಾಗಿದೆ.

ದಯೆಯೇ ಧರ್ಮದ ಮೂಲವೆಂದು ಬುದ್ಧನ ಅಹಿಂಸಾ ತತ್ವಗಳನ್ನು ವಿಶ್ವದೆಲ್ಲೆಡೆ ಪ್ರಚಾರ ಮಾಡಿದ ಚಕ್ರವರ್ತಿ ಅಶೋಕನ ಹೆಸರನ್ನು ನೆನಪಿಸುತ್ತಾ, ಅಶೋಕನ ಧರ್ಮ ಚಕ್ರದ ಸಾರನಾಥ ಸ್ಥಂಭವೇ ರಾಷ್ಟ್ರ ಧ್ವಜವನ್ನು ಹಾರಿಸುವ ಸ್ಥಂಭವಾಗಿದೆ. ನಾಲ್ಕು ದಿಕ್ಕುಗಳಿಗೆ ಮುಖ ಮಾಡಿ ನಿಂತಿರುವ ಸಿಂಹಗಳು ನಾಲ್ಕು ದಿಕ್ಕುಗಳ ಸಾರ್ವಭೌಮತ್ವವನ್ನು ಪಡೆಯುವ ಸಂಕೇತವಾಗಿದೆ.

ಸತ್ಯ ಮೇವ ಜಯತೆ, ಎನ್ನುವ ಮುಂಡಕೋಪನಿಷತ್ತಿನ ಸೂಕ್ತಿಯು ಸತ್ಯವೊಂದೇ ಗೆಲ್ಲುತ್ತದೆ ಎನ್ನುವ ತತ್ವವನ್ನು ವಿಶ್ವಕ್ಕೆ ಸಾರಿ ಹೇಳುತ್ತದೆ. ಸ್ತಂಭದ ಕೆಳಭಾಗದಲ್ಲಿರುವ ನಾಲ್ಕು ಪ್ರಾಣಿಗಳಾದ ವೃಷಭ, ಕುದುರೆ, ಆನೆ, ಸಿಂಹಗಳು, ಭಾರತೀಯರಾದ ನಾವೆಲ್ಲರೂ ವೃಷಭದಂತೆ ಕಠಿಣ ಪರಿಶ್ರಮ, ಕುದುರೆಯ ವೇಗ, ಆನೆಯ ಶಕ್ತಿ ಹಾಗೂ ಸಿಂಹದಂತೆ ಸಾರ್ವಭೌಮತ್ವವನ್ನು ಪಡೆದು ನಮ್ಮ ದೇಶವನ್ನು ಮುನ್ನಡೆಸಬೇಕೆಂದು ತಿಳಿಸುವ ಸಂಕೇತವಾಗಿದೆ.

ಭಾರತದ ಸರ್ಕಾರ 1950 ಜನವರಿ 26 ರಂದು ಈ ಶಿಲ್ಪವನ್ನು ನಮ್ಮ ರಾಷ್ಟ್ರಲಾಂಛನವನ್ನಾಗಿ ಅಂಗೀಕರಿಸಿದೆ. ಈ ಲಾಂಚನವನ್ನು ಸರ್ಕಾರದ ಮುದ್ರೆಯಾಗಿ ಮಾತ್ರ ಬಳಸಲಾಗುತ್ತದೆ ಹೊರತು ಪಡಿಸಿ ಯಾವುದೇ ಕಂಪನಿ, ಸಂಸ್ಥೆಗಳು, ಇತರೆ ಚಿಹ್ನೆಯಾಗಿ ಬಳಸಿದರೆ ಶಿಕ್ಷಾರ್ಹ ಅಪರಾಧ.

**ಸ್ವತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವದ ಧ್ವಜಾರೋಹಣ ನಡುವಣ ವ್ಯತ್ಯಾಸ :**

ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಧ್ವಜವನ್ನು ಕೆಳಗಿನಿಂದ ಮೇಲಕ್ಕೆ ಎಳೆಯಲಾಗುತ್ತದೆ. ನಂತರ ಅದನ್ನು ಬಿಚ್ಚಲಾಗುತ್ತದೆ. ಇದನ್ನು ಧ್ವಜಾರೋಹಣ ಎಂದು ಕರೆಯಲಾಗುತ್ತದೆ. ಇದನ್ನು ಆಂಗ್ಲ ಭಾಷೆಯಲ್ಲಿ Flag Hoisting ಎನ್ನುತ್ತಾರೆ. ಆದರೆ ಜನವರಿ 26 ಗಣರಾಜ್ಯೋತ್ಸವದ ಸಂದರ್ಭದಲ್ಲಿ ಧ್ವಜವನ್ನು ಮೇಲ್ಭಾಗದಲ್ಲಿ ಕಟ್ಟಲಾಗುತ್ತದೆ. ಅದನ್ನು ಬಿಚ್ಚಲಾಗುತ್ತದೆ. ಸಂವಿಧಾನದಲ್ಲಿ ಇದನ್ನು ಧ್ವಜ ಅನಾವರಣ ಎಂದು ಕರೆಯುತ್ತಾರೆ. ಆಗಸ್ಟ್ 15ರಂದು ಕೇಂದ್ರ ಸರ್ಕಾರದ ಮುಖ್ಯಸ್ಥರಾದ ಪ್ರಧಾನ ಮಂತ್ರಿಗಳು ಧ್ವಜಾರೋಹಣ ಮಾಡಿದರೆ, ಸಂವಿಧಾನದ ಅನುಷ್ಠಾನ ಸ್ಮರಣಾರ್ಥವಾಗಿ ಆಚರಿಸಲಾಗುವ ಜನವರಿ 26ರಂದು ಸಂವಿಧಾನದ ಮುಖ್ಯಸ್ಥರಾದ ರಾಷ್ಟ್ರಪತಿಗಳು ಧ್ವಜ ಅನಾವರಣ ಮಾಡುತ್ತಾರೆ.

ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಕೆಂಪುಕೋಟೆಯಿಂದ ಧ್ವಜಾರೋಹಣ ಮಾಡಲಾಗುತ್ತದೆ. ಗಣರಾಜ್ಯೋತ್ಸವದ ರಾಜಪಥದಲ್ಲಿ ಧ್ವಜ ಅನಾವರಣ ಮಾಡಲಾಗುತ್ತದೆ.



78ನೇ ಸ್ವಾತಂತ್ರ್ಯದ ದಿನಾಚರಣೆಯಲ್ಲಿ ನಾವೆಲ್ಲರೂ ವಿವೇಕಯುತ ಆತ್ಮಾವಲೋಕನ ಮಾಡಿಕೊಳ್ಳಬೇಕು. I am doing My duty ಎನ್ನುವ ಕಲ್ಪನೆ ಹೋಗಿ I am Serving My Nation ಎನ್ನುವ ಧೋರಣೆ ಬೇಕು.

**- ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ,** ದಾವಣಗೆರೆ.

# ವೆಚ್ಚದ ಕಾಮಗಾರಿಗಳಿಗೆ ಚಾಲನೆ



**(1ನೇ ಪುಟದಿಂದ)** ಉತ್ತಮ ರಸ್ತೆಗಳನ್ನು ಹಾಳು ಮಾಡಿದ್ದು, ಇಂದು ಮತ್ತೆ ನಾವು ಅಧಿಕಾರಕ್ಕೆ ಬಂದ ನಂತರ ಹದಗೆಟ್ಟ ರಸ್ತೆಗಳನ್ನು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ. ಈಗಾಗಲೇ ಪ್ರಮುಖ ರಸ್ತೆಗಳನ್ನು ಆಧುನಿಕರಣಕ್ಕೆ ಚಾಲನೆ ನೀಡಲಾಗಿದ್ದು, ಇನ್ನಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಬಿಜೆಪಿಯ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಪಕ್ಷದಲ್ಲಿ ಬಿದ್ದಿರುವ ಹೆಗ್ಗಣಗಳನ್ನು ನೋಡದೆ ಬೇರೆ ಪಕ್ಷಗಳ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮ ಬಗ್ಗೆ ಮಾತನಾಡಲು ಅವರಿಗೆ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಅವರು, ಪಟ್ಟ ಭದ್ರ ಹಿತಾಸಕ್ತಿಗಳ ಯೋಗ್ಯತೆ ನನಗೆ ಗೊತ್ತಿದ್ದು ಅವರಿಗೆ ಸಮಯ ಬಂದಾಗ ಪಾಠ ಕಲಿಸುತ್ತೇನೆ ಎಂದು ಎಚ್ಚರಿಸಿದರು.

ಇದೇ ವೇಳೆ ಆಯಾ ಭಾಗದ ನಾಗರಿಕರು ಮತ್ತು ಸಾರ್ವಜನಿಕರು ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದಾಗ ಸಚಿವರು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಮಸ್ಯೆ ಬಗೆಹರಿಸುವಂತೆ ಸೂಚನೆ ನೀಡಿದರು.

ಅನುದಾನ ನೀಡಿದ ಸಚಿವರನ್ನು ಅಭಿನಂದಿಸಿ ಮಾತನಾಡಿದ ಪಾಲಿಕೆ ಸದಸ್ಯ ಎ.ನಾಗರಾಜ್, ಈ ಹಿಂದೆ ಇದ್ದ 25 ವರ್ಷಗಳ ಕಾಲ ಸಂಸದರು ಒಂದೇ ಒಂದು ದಿನ ಅಧಿವೇಶನದಲ್ಲಿ ಮಾತನಾಡಲಿಲ್ಲ. ಕಳೆದ ಒಂದು ತಿಂಗಳಲ್ಲಿ ನೂತನ ಸಂಸದರಾದ ಪ್ರಭಾ ಮಲ್ಲಿಕಾರ್ಜುನ ಅವರು ದಾವಣಗೆರೆ ಕ್ಷೇತ್ರದ ಜಲ್ವಂತ ಸಮಸ್ಯೆಗಳ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಿ ಅಭಿನಂದನೆಗೆ ಪಾತ್ರರಾಗಿದ್ದಾರೆ. ಸಂಬಂಧಪಟ್ಟ ಸಚಿವರಿಗೆ ಮನವಿ ಸಲ್ಲಿಸಿ ಅದಷ್ಟು ಶೀಘ್ರ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಿದ್ದಾರೆ. ಇಂತಹ ಸಂಸದರನ್ನು ಪಡೆದ ನಾವು ಧನ್ಯರು ಎಂದರು.

ನಗರ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಮಾತನಾಡಿ, ಈ ಹಿಂದಿನ ಬಿಜೆಪಿ ಅವಧಿಯಲ್ಲಿ ಈ ಭಾಗಕ್ಕೆ ಯಾವುದೇ ಅನುದಾನ ನೀಡದೆ ವಂಚಿಸಲಾಗಿತ್ತು. ಎಸ್. ಎಸ್. ಮಲ್ಲಿಕಾರ್ಜುನ್ ಅವರು ಶಾಸಕರಾಗಿ, ಮಂತ್ರಿಗಳಾದ ನಂತರ 5 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ನೀಡಿದ್ದು, ಈ ಭಾಗದ ನಾಗರಿಕರು ಇದನ್ನು ತಿಳಿದು ಮತ ಚಲಾಯಿಸುವಾಗ ಅಭಿವೃದ್ಧಿಪರ ಬೆಂಬಲ ವ್ಯಕ್ತಪಡಿಸಬೇಕೆಂದು ಮನವಿ ಮಾಡಿದರು.

ಪಾಲಿಕೆಯ ಮಹಾಪೌರರಾದ ವಿನಾಯಕ ಪೈಲ್ವಾನ್, ಆಯುಕ್ತರಾದ ಶ್ರೀಮತಿ ರೇಣುಕಾ, ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಜಗದೀಶ್, ಸದಸ್ಯರುಗಳಾದ ಶ್ರೀಮತಿ ಜಯಮ್ಮ ಗೋಪಿ ನಾಯಕ್, ಪಾಮೇನಹಳ್ಳಿ ನಾಗರಾಜ್, ಕೆ.ಬಿ. ರುದ್ರೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಿವೇಶನಕ್ಕಾಗಿ ಬಾತಿ ಗುಡ್ಡದ ಪರಿಸರ ನಾಶ ಮಾಡದಿರಲು ಒತ್ತಾಯ

ದಾವಣಗೆರೆ, ಆ. 13- ಬಡಜನರಿಗೆ ನಿವೇಶನ ಮಂಜೂರು ಮಾಡಲು ಜಿಲ್ಲಾಡಳಿತ ಉದ್ದೇಶಿಸಿದ್ದು, ಇದರಿಂದ ನಗರಕ್ಕೆ ಹೊಂದಿಕೊಂಡಿರುವ ಏಕೈಕ ಬಾತಿ ಗುಡ್ಡದ ಪರಿಸರ ಸಂಪೂರ್ಣ ಹಾಳಾಗತ್ತದೆ ಎಂದು ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೊಡ್ಡಬಾತಿ ಗ್ರಾಮದ ಕಸಬಾ ಹೋಬಳಿ ಸರ್ವೆ ನಂ. 240 ರ ಹತ್ತಿರ ಸ.ನಂ. 300 ರಲ್ಲಿ ಐದು ಎಕರೆ ಹಾಗೂ ಸ.ನಂ. 301 ರಲ್ಲಿ ಒಂದು ಎಕರೆ ಜಮೀನನ್ನು ನಿವೇಶನ ಮಾಡಿ ಬಡಜನರಿಗೆ ನಿವೇಶನ ಮಂಜೂರು ಮಾಡಲು ಜಿಲ್ಲಾಡಳಿತ ಆದೇಶಿಸಿದೆ ಎಂದರು.

ಬಡವರಿಗೆ ನಿವೇಶನ ಮಂಜೂರು ಮಾಡಲು 2024 ರ ಫೆಬ್ರವರಿ 13 ರಂದು ದಾವಣಗೆರೆ ತಾಲ್ಲೂಕಿನ ದೊಡ್ಡಬಾತಿ ಗ್ರಾಮ ಪಂಚಾಯತಿ ಅಧ್ಯಕ್ಷರು ತಹಶೀಲ್ದಾರ್ ಅವರಿಗೆ ಪತ್ರ ಬರೆದಿದ್ದಾರೆ. ಅವರ ಪತ್ರದಂತೆ ದಾವಣಗೆರೆ ವಲಯ ಅರಣ್ಯಾಧಿಕಾರಿಗಳು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಭೂ ಮಾಪನ ಇಲಾಖೆಗೆ ಪತ್ರ ಬರೆದಿದ್ದಾರೆ. ಆದರೆ ಹಾಲಿ ಸದರಿ ಸರ್ವೆ ನಂ.ನಲ್ಲಿ ಸುಮಾರು 30 ವರ್ಷಗಳ ಮರ-ಗಿಡಗಳಿವೆ. ವಿವಿಧ ಪ್ರಭೇದದ ಪಕ್ಷಿ ಸಂಕುಲ ಸಹ ವಾಸವಾಗಿದೆ. ಸದರಿ ಸರ್ಕಾರಿ ಜಾಗವನ್ನು ಬಡವರಿಗೆ ನಿವೇಶನ ಮಾಡಲು ಮಂಜೂರು ಮಾಡಲು ಯೋಜಿಸಿದ್ದು, ಮರಗಳನ್ನು ಕಡಿದು, ಮಣ್ಣು ತೆಗೆಯುವುದರಿಂದ ಗುಡ್ಡ ಕುಸಿಯುತ್ತದೆ ಎಂದು ಹೇಳಿದರು. ಅಲ್ಲದೇ ದಾವಣಗೆರೆಗೆ ಹೊಂದಿಕೊಂಡಿರುವ ಏಕೈಕ ಗುಡ್ಡದ ಪರಿಸರ ಸಂಪೂರ್ಣ ಹಾಳಾಗುತ್ತದೆ. ಯಾವುದೇ ಕಾರಣಕ್ಕೂ ಸಹ ಹಾಲಿ ಇರುವ ಮರಗಳನ್ನು ಕಡಿಯಬಾರದು ಎಂದು ಒತ್ತಾಯಿಸಿದರು.

ಅರಣ್ಯ ಇಲಾಖೆ ವರದಿ ನೀಡುವಾಗ ಮರಗಳನ್ನು ಉಳಿಸುವ ಬಗ್ಗೆ ಹಾಗೂ ಅವುಗಳ ಸಂರಕ್ಷಣೆ ಬಗ್ಗೆ ಈ ಪ್ರದೇಶದಲ್ಲಿ ಎಷ್ಟು ಜಾತಿಯ ಮರಗಳಿವೆ ಎಂದು ಅಂಕಿ-ಅಂಶ ನೀಡಿಲ್ಲ. ಅಲ್ಲದೇ ಸರ್ಕಾರಕ್ಕೆ ಈ ಜಾಗದಲ್ಲಿ ಗಿಡ, ಮರಗಳಿವೆ. ಇದನ್ನು ನಮ್ಮ ಇಲಾಖೆಗೆ ನೀಡಿ ಎಂದು ಪತ್ರ ಸಹ ಬಂದಿಲ್ಲ. ಏಕಾಏಕಿ ಇಷ್ಟೊಂದು ಮರಗಳನ್ನು ಕಡಿಯಲು ಕಾರಣವೇನು.ಇದರ ಹಿಂದೆ ಭೂ ಮಾಫಿಯಾ ಇರಬಹುದು ಎಂಬ ಶಂಕೆ ವ್ಯಕ್ತವಾಗುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ, ಕಂದಾಯ ಸಚಿವರು, ಮುಖ್ಯ ಕಾರ್ಯದರ್ಶಿಗಳಿಗೆ, ಅರಣ್ಯ ಸಚಿವರ ಕಚೇರಿಗೆ ಈ-ಮೇಲ್ ಮಾಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೂ ಮನವಿ ಮಾಡಲಾಗಿದೆ ಎಂದರು.

ಯಾವುದೇ ಸರ್ಕಾರಿ ಜಾಗದಲ್ಲಿ ಬೆಳೆದ ಮರ, ಗಿಡಗಳಿದ್ದರೆ ರಾಜ್ಯ ಸರ್ಕಾರ ಅವುಗಳ ಸರ್ವೆ ಮಾಡಿಸಿ, ಪರಿಸರ ಸಂರಕ್ಷಣೆ ಮಾಡಿ, ಜೀವ ಸಂಕುಲದ ಉಳಿವಿಗೆ ಮುಂದಾಗುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗಿರೀಶ್ ದೇವರಮನಿ, ಕೆ.ಟಿ. ಗೋಪಾಲಗೌಡ, ಕೆ.ಎನ್. ರವಿಕುಮಾರ್, ಇ. ಬಸವರಾಜ್, ಶ್ರೀನಿವಾಸ್ ಉಪಸ್ಥಿತರಿದ್ದರು.

# ಸಂಸದನ ವಿರುದ್ಧ ಅಕ್ರಮ ಹಣ ಪ್ರಕರಣ

ನವದೆಹಲಿ, ಆ. 13 - ತೃಣಮೂಲ ಕಾಂಗ್ರೆಸ್ ರಾಜ್ಯಸಭಾ ಸದಸ್ಯ ಸಾಕೇತ್ ಗೋಖಲೆ ವಿರುದ್ಧ ಅಹಮದಾಬಾದ್ ಪಿಎಮ್‌ಎಲ್‌ಎ ವಿಶೇಷ ನ್ಯಾಯಾಲಯ ದಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ. ಅಕ್ರಮ ಹಣ ಆರೋಪಕ್ಕೆ ಸಂಬಂಧಿಸಿದಂತೆ ಗುಜರಾತ್ ಪೊಲೀಸರು ಗೋಖಲೆ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಇದರ ಆಧಾರದ ಮೇಲೆ ಪ್ರಕರಣ ಹೂಡಲಾಗಿದೆ.

# ಮಹಿಳಾ ಕಾಂಗ್ರೆಸ್‌ಗೆ ಸೌಮ್ಯ

**(1ನೇ ಪುಟದಿಂದ)** ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಸೌಮ್ಯ ರೆಡ್ಡಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಸದ್ಯ ಪುಷ್ಪಾ ಅಮರನಾಥ್ ಅವರು ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷರಾಗಿದ್ದರು. ಸೌಮ್ಯಾ ರೆಡ್ಡಿ ಅವರು, ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ತೇಜಸ್ವಿ ಸೂರ್ಯ ವಿರುದ್ಧ ಪರಾಜಿತಗೊಂಡಿದ್ದರು.

41 ವರ್ಷದ ಸೌಮ್ಯ ರೆಡ್ಡಿ, ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೆಮಿಕಲ್ ಇಂಜಿನಿಯರಿಂಗ್ ಅಧ್ಯಯನ ಪೂರ್ಣಗೊಳಿಸಿ, ನ್ಯೂಯಾರ್ಕ್‌ನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಂಎಸ್ ಅಧ್ಯಯನ ಪೂರ್ಣಗೊಳಿಸಿದ್ದಾರೆ.

# ಮಹಿಳಾ ಸ್ವಸಹಾಯ ಗುಂಪುಗಳಿಗೆ ಅರ್ಜಿ ಆಹ್ವಾನ

ದಾವಣಗೆರ, ಆ. 13 - ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅಲ್ಪಸಂಖ್ಯಾತರ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸಹಾಯಧನ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಇದೇ ದಿನಾಂಕ 31 ರೊಳಗಾಗಿ ವೆಬ್‌ಸೈಟ್ https://kmdconline.karnataka.gov.in ನಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ದಿ ನಿಗಮ ನಿಯಮಿತವನ್ನು ಸಂಪರ್ಕಿಸಬಹುದೆಂದು ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಸವಿತಾ ಸಮಾಜದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ,ಆ.13- ಸವಿತಾ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದಿಂದ 2023-24 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಶೇಕಡ 60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 20 ಕೊನೆ ದಿನವಾಗಿದ್ದು, ಮಾಹಿತಿಗೆ ಮೊ: 6361639612, 9964931098 ಸಂಪರ್ಕಿಸಬಹುದು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ ದಕ್ಷಿಣ 40×60 (59 ಲಕ್ಷ), 50x80 ಪಶ್ಚಿಮ ರೂ. 2465-00 ಅಡಿಗೆ, 40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ) 40 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409
120 ರಸ್ತೆ, ಕಮರ್ಷಿಯಲ್ 40x60 ಉತ್ತರ (93 ಲಕ್ಷ)

**ಸೈಟುಗಳು ಮಾರಾಟಕ್ಕಿವೆ**
ಕೆ.ಬಿ. ಬಡಾವಣೆಯಲ್ಲಿ ಕಿರುವಾಡಿ ಸರ್ಕಲ್ ಹತ್ತಿರ 40x44 South, MBA ಕಾಲೇಜ್ ರೋಡಿಗೆ 30x40 North ಕಮರ್ಷಿಯಲ್,
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಟೀಂ ಅಕಾಡೆಮಿ ಕಾಲೇಜ್ ಹತ್ತಿರ 30x40 ಪೂರ್ವ, 30x50 ಪೂರ್ವ, 30x40 ಪಶ್ಚಿಮ, 30x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
80952 54434, 9448202030

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 6 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರಸಭೆ ಡೋ. ನಂ., ಬ್ಯಾಂಕ್ ಸಾಲ ಸೌಲಭ್ಯ ಸಿಗುತ್ತದೆ. ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**Car Loan / ಕಾರ್ ಲೋನ್**
Nationalised / ಸರ್ಕಾರಿ ಬ್ಯಾಂಕಿನಿಂದ ಮನೆಯಲ್ಲಿ ಕುಳಿತು ಕಾರ್ ಲೋನ್ ಪಡೆಯಿರಿ. 10 ರಿಂದ 50gm ಬೆಳ್ಳಿ ಕಾಯಿನ್ ಉಚಿತವಾಗಿ ಪಡೆಯಿರಿ.
* condition apply
96325 54524

**ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್‌ನಲ್ಲಿ ಅನುಭವವುಳ್ಳ ನುರಿತ ಡ್ರೈವರ್ ಬೇಕಾಗಿದ್ದಾರೆ.
90365 74144

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗ 30x40, 30x40 East ಅಕ್ಕ-ಪಕ್ಕ, Rate - 2600/- 40x50 North East Corner, Rate - 3800/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
2 BHK ವಾಸದ ಮನೆ # 3893, 1ನೇ ಕ್ರಾಸ್, ಕೆನರಾ ಬ್ಯಾಂಕ್ ಎದುರು, ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
98802 10699

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಲೀಸ್ ಗೆ / ಬಾಡಿಗೆಗೆ ಇದೆ**
1ನೇ ಮಹಡಿ 40x40, 10x15ರ 9 ರೂಮುಗಳು, ದಕ್ಷಿಣ ಬಾಗಿಲು, 2ನೇ ಮಹಡಿ 40x40, 20x20ರ 4 ರೂಮುಗಳು ಲಭ್ಯವಿದೆ. ಮಾರ್ಕೆಟಿಂಗ್ ಕಂಪನಿ/ಹಾಸ್ಟೆಲ್/ಕಂಪ್ಯೂಟರ್/ಟ್ರೈಲರಿಂಗ್ ನಡೆಸಲು ಯೋಗ್ಯವಾಗಿದೆ. ಬೋರ್ ವೆಲ್, ಕಾರ್ಪೋರೇಷನ್ ನೀರು, ಪಾರ್ಕಿಂಗ್ ಸೌಲಭ್ಯವಿರುತ್ತದೆ. ವಿಜಯನಗರ, 3ನೇ ಕ್ರಾಸ್, ಏರ್ ಟೆಲ್ ಟವರ್ ಹತ್ತಿರ, ಹೊಸ RTO ಆಫೀಸ್ ಎದುರು, ದಾವಣಗೆರೆ.
99022 99961/97417 46205
73493 97287/84312 55250

**ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ ಕಂ ರಿಸಪ್ಷನಿಸ್ಟ್ (ಮಹಿಳೆ)-1 ವಿದ್ಯಾರ್ಹತೆ : 10ನೇ/ಪಿಯುಸಿ ಟೈಲರಿಂಗ್ ಆದವರಿಗೆ ಆದ್ಯತೆ. ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ)-1, ವಿದ್ಯಾರ್ಹತೆ : PUC ದ್ವಿ-ಚಕ್ರ ವಾಹನವುಳ್ಳವರಿಗೆ ಆದ್ಯತೆ.
ಮಾಸಿಕ ವೇತನ : 8000-12000
95915 01592

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋ ರೂಂಗೆ Tally ಗೊತ್ತಿರುವ ಅಕೌಂಟೆಂಟ್ ಬೇಕಾಗಿದ್ದಾರೆ.
ಮಾಗನೂರು ಎಂಟರ್ ಪ್ರೈಸಸ್
ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
97436 36000

**ಮನೆ ಬಾಡಿಗೆಗೆ ಇದೆ**
#853/6 ಮೊದಲನೇ ಹಂತ ಎರಡನೇ ಮೇನ್, 6ನೇ ಕ್ರಾಸ್‌ನಲ್ಲಿರುವ ಸಿಂಗಲ್ ಬೆಡ್ ರೂಮ್ ಮನೆ, CMC & ಬೋರ್, ಎರಡೂ ನೀರಿನ ವ್ಯವಸ್ಥೆ ಇರುವ ಮನೆ ಶಿವಕುಮಾರ ಸ್ವಾಮಿ ಬಡಾವಣೆ. ಸಸ್ಯಹಾರಿಗಳಿಗೆ ಸಂಪರ್ಕಿಸಿ :
63618 93176

**ಬೇಕಾಗಿದ್ದಾರೆ**
ದಾವಣಗೆರೆ ಪ್ರತಿಷ್ಠಿತ ಹೋಟೆಲ್ ನಲ್ಲಿ ಕ್ಯಾಶಿಯರ್, ಸಪ್ಲೈಯರ್, ಕ್ಲೀನರ್ ಮತ್ತು ಸರ್ವೀಸ್ ಕೆಲಸಕ್ಕೆ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
94489 80070, 88847 04025

**ಕಟ್ಟಡ ಬಾಡಿಗೆಗೆ ಇದೆ**
ಡಾಲರ್ಸ್ ಕಾಲೋನಿಯಲ್ಲಿ ಹಾಸ್ಟೆಲ್ / ನರ್ಸಿಂಗ್ ಹೋಂ ಪ್ರಾರಂಭಿಸಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ.
88674 46224

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು, ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ. ಫಿಜಿಯೋಥೆರಪಿ ಮಾಡಲಾಗುತ್ತದೆ.
85508 36642

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

Sri Nidhi Educational Trust (R)
**ನೇರ ಪರೀಕ್ಷೆಗಳು**
SSLC, PUC, BA, B.Com, BCA, MA, M.Com, M.Sc, Diploma Course, BE, B.Tech, B.Lib, M.Lib, MBA, MCA & All Courses
77609 55550

**ಸೈಟುಗಳು ಮಾರಾಟಕ್ಕಿವೆ**
KHB ಸೈಟುಗಳು, ಬೇರೆ ಸೈಟುಗಳು, ಮನೆಗಳು, ಹೊಲಗಳು, ಚಿತ್ರದುರ್ಗದ ಹತ್ತಿರ, ಜೆ.ವಿ.ಗೆ 10 ಎಕರೆ ಜಮೀನು ಇದೆ.
ಏಜೆಂಟ್ B.G.S.
89707 10578

**ROBOTIC CLASS**
Age : 8 years & above,
Bruit academy
Nijalingappa Badavane
97390 66956

ಜನ ಆಶಾ ಸೌತ್ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ**
RBI Approved
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF, Health Insurance ಸೌಲಭ್ಯವಿರುತ್ತದೆ
99720 42558, 96864 12409

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಬಾಡಿಗೆಗೆ ಇದೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಕಲ್ಲೇಶ್ವರ ನಿಲಯ, 1ನೇ ಮಹಡಿ, 2ನೇ ಮಹಡಿ, (ಲಿಫ್ಟ್ ಸೌಲಭ್ಯ), ಕೆಳಮಹಡಿ ಮತ್ತು ATMಗೆ ಜಾಗ
99646 99096

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads
Memory Techniques + Hand Writing
97398 65711, 94822 44114

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
96860 22969

ಓದುಗರ ಗಮನಕ್ಕೆ
-ಜಾಹೀರಾತು ವ್ಯವಸ್ಥಾಪಕರು

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಜಗಳೂರು ಪಟ್ಟಣದ ಸರ್ಕಾರಿ ಬಸ್ ನಿಲ್ದಾಣಕ್ಕೆ ಸಮೀಪವಿರುವ, ಮೂರು ಕಡೆಗೂ ರಸ್ತೆ ಸಂಪರ್ಕವನ್ನು ಹೊಂದಿರುವ ಕಮರ್ಷಿಯಲ್ ಉಪಯೋಗಕ್ಕೆ ಬೇಕಾದ 23,312 ಚದರ ಅಡಿಯುಳ್ಳ, ಫೈನಲ್ ಅಪ್ರೂವಲ್ ಆಗಿರುವ ಕಾರ್ನರ್ ಸೈಟ್ ಮಾರಾಟಕ್ಕಿದೆ.
9606307471
82770 57777

**ಬೇಕಾಗಿದ್ದಾರೆ**
ಪ್ರಸಿದ್ಧ ವೆಜ್ ರೆಸ್ಟೋರೆಂಟ್‌ಗೆ ಅನುಭವವಿರುವ ಸೌತ್ ಇಂಡಿಯನ್ ಕುಕ್ಸ್ (ಆಂಧ್ರ ಸ್ಟೈಲ್) ಬೇಕಾಗಿದ್ದಾರೆ.
72596 60786

Restaurant With Juice Stall for Sale
Anjaneya Complex, S.S. Hospital Opposite. Contact :
93410 12028

**REQUIRED**
* Fitters
* Business Administration Qualification (MBA) HR
**Nilkamal Furnitures**
Contact :
82967 09299

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡೆಲಿವರಿ ಮಾಡಲು ಟಾಟಾ ಏಸ್ ಓಡಿಸಲು ಬರುವ ಡ್ರೈವರ್ ಗಳು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ : ವಾಟ್ಸ್‌ಆಪ್ ನಂಬರ್ :
89711 19130
Call-98800 42597

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**WANTED**
Banking Sector Tele Caller (Female Only)
Qualification : Any Degree
90715 55081
Interview Time : 11AM

**ಬಾಡಿಗೆಗೆ / ಲೀಸ್‌ಗಿವೆ**
ದೇವರಾಜ ಅರಸು ಬಡಾವಣೆ : ಲೀಸ್ 5.5 ಲಕ್ಷ, 2ನೇ ಮಹಡಿ ಪೂರ್ವ ಬಾಗಿಲು 2BHK. ಬಾಡಿಗೆ ರೂ.6,000/, ದಕ್ಷಿಣ ಬಾಗಿಲು, 2BHK.
ವಿಜಯನಗರ ಬಡಾವಣೆ : 1ನೇ ಮಹಡಿ 40x40, 10x15, ಒಟ್ಟು 8 ರೂಂಗಳು, 2ನೇ ಮಹಡಿ 40x40, 20x20 ಒಟ್ಟು 4 ರೂಂಗಳು ಬಾಡಿಗೆಗಿವೆ.
ಮಿಟ್ಲಕಟ್ಟೆ : 20x35 ಒಟ್ಟು 3 ರೂಂಗಳು ಬಾಡಿಗೆಗಿವೆ. ಬೋರ್ ವೆಲ್/ ಕಾರ್ಪೋರೇಷನ್ ನೀರು, ಕಾರು ಪಾರ್ಕಿಂಗ್ ವ್ಯವಸ್ಥೆ ಇದೆ.
974174 6205, 73493 97287
84312 55250, 99022 99961

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ವಾರದ ಚೀಟಿ ಪ್ರಾರಂಭ**
ಕಂತುಗಳಲ್ಲಿ 1400/- ರಿಂದ 2000/- ರೂಗಳು, 50 ಸದಸ್ಯರು, 50 ವಾರಗಳು. ಸಂಪರ್ಕಿಸಿ :
78997 75159

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿನಾಂಕ : 09.09.2024 ರಿಂದ 16.09.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ
ಅಕ್ಟೋಬರ್ 16 ರಿಂದ 26ರವರೆಗೆ
ಅಯೋಧ್ಯ-ನೇಪಾಳ ಪ್ರವಾಸ
ನಮ್ಮಲ್ಲಿ ಶಾಲಾ-ಕಾಲೇಜುಗಳಿಗೆ ಪ್ಯಾಕೇಜ್ ದರದಲ್ಲಿ ಪ್ರವಾಸ ಕೈಗೊಳ್ಳಲಾಗುತ್ತದೆ.
94485 33928, 90086 26473

**ಮಳಿಗೆ/ಗೋದಾಮು ಬಾಡಿಗೆಗೆ ಇದೆ**
ಡಿ.ಸಿ. ಆಫೀಸ್ ಹತ್ತಿರ, ಕರೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಮಳಿಗೆ/ಗೋದಾಮು ಬಾಡಿಗೆಗೆ ಇದೆ.
97394 68974

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

# ತ್ಯಾಗ, ಬಲಿದಾನದ ಸಿಕ್ಕಿರುವ ಸ್ವಾತಂತ್ರ್ಯ ರಕ್ಷಣೆ ಎಲ್ಲರ ಹೊಣೆ



**ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯಕ್ರಮದಲ್ಲಿ ಪಂಪ ಪ್ರಶಸ್ತಿ ಪುರಸ್ಕೃತ ನಾಡಿನ ಹಿರಿಯ ಲೇಖಕ ಡಾ. ಬಾಬು ಕೃಷ್ಣಮೂರ್ತಿ**

ದಾವಣಗೆರೆ, ಆ. 13- ಲಕ್ಷಾಂತರ ಮಂದಿಯ ತ್ಯಾಗ, ಬಲಿದಾನಗಳಿಂದ ಸಿಕ್ಕಿರುವ ಭಾರತದ ಸ್ವಾತಂತ್ರ್ಯವನ್ನು ದುರುಳರಿಂದ ರಕ್ಷಿಸಬೇಕಾದ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದು ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಲೇಖಕ ಡಾ. ಬಾಬು ಕೃಷ್ಣಮೂರ್ತಿ ಹೇಳಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿವೇಕ ಸಭಾಂಗಣದಲ್ಲಿ ರಾಷ್ಟ್ರೋತ್ಥಾನ ಬಳಗ ಹಾಗೂ ವರ್ತಮಾನ ವೇದಿಕೆ ಸಹಯೋಗದಲ್ಲಿ ಚಂದ್ರಶೇಖರ್ ಆಜಾದ್ ಜೀವನ ಆಧಾರಿತ ಕಾದಂಬರಿ 'ಅಜೇಯ' ದ ಸುವರ್ಣ ಸಂಭ್ರಮ, ವಾಸುದೇವ ಬಲವಂಥ ಪಡಕೆ ಜೀವನ ಆಧರಿತ ಕಾದಂಬರಿ 'ಅದಮ್ಯ' ಕ್ಕೂ ನಲವತ್ತರ ಸಂಭ್ರಮದ ನಿಮಿತ್ಯ ತಮಗೆ ಏರ್ಪಾಡಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಅಷ್ಟೇ ಅಲ್ಲದೇ ಸ್ವಾತಂತ್ರ್ಯ ನಂತರ ಕೂಡ ಭಾರತಕ್ಕೆ ಗಂಡಾಂತರ ಎದುರಾಗಿದೆ. ಮನೆ ಮುರುಕುರು, ಲಕ್ಷಾಂತರ ರಾಜಕಾರಣಿಗಳು ದೇಶವನ್ನು ಸೋಲಿಸುವ ಪ್ರಯತ್ನದಲ್ಲಿದ್ದಾರೆ. ಇಲ್ಲಿಯೇ ಹುಟ್ಟಿ ಇಲ್ಲಿಯ ಗಾಳಿ, ನೀರು, ಅನ್ನವನ್ನು ತಿಂದು ದೇಶಕ್ಕೆ ದ್ರೋಹ ಬಗೆಯುವ ಕೆಲಸ ಮಾಡುತ್ತಿದ್ದಾರೆ.ಇಂತಹ ದೇಶದ್ರೋಹಿಗಳನ್ನು ಮಟ್ಟ ಹಾಕಲು ಎಲ್ಲರೂ ಜಾಗೃತರಾಗಬೇಕಿದೆ. ಸತ್ಯ ಸಂಗತಿಯ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ವೈಯಕ್ತಿಕ ಜೀವನದ ಜೊತೆಗೆ ದೇಶದ ಬಗ್ಗೆ ಚಿಂತನೆ ಮಾಡಬೇಕಾಗಿದೆ. ತಾಯಿ ಭಾರತಾಂಬೆಯ ಸೇವೆ ಮಾಡಿದಾಗ ಮಾತ್ರ ಜೀವನಕ್ಕೆ ಸಾರ್ಥಕತೆ ಬರುತ್ತದೆ ಎಂದು ಹೇಳಿದರು.

ಅಹಿಂಸೆ, ಶಾಂತಿಯಿಂದ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದಿಲ್ಲ. ಎರಡನೇ ಮಹಾಯುದ್ಧದಲ್ಲಿ ಭಾರೀ ಪೆಟ್ಟು ತಿಂದಿದ್ದ ಬ್ರಿಟಿಷರು, ನೇತಾಜಿ ಸುಭಾಷಚಂದ್ರ ಬೋಸರ ಆಜಾದ್ ಹಿಂದ್ ಫೌಜ್, ಮುಂಬೈ ನೌಕಾದಳದ ದಂಗೆ ಹಾಗೂ ಭಾರತೀಯರಲ್ಲಿ ಹೆಚ್ಚುತ್ತಿದ್ದ ಅಸಹನೆಯಿಂದ ದೇಶವನ್ನು ಬಿಟ್ಟು ಹೋಗಬೇಕಾಯಿತು ಎಂದರು.

ನಮ್ಮ ಪೂರ್ವಜರು ತಮ್ಮ ರಕ್ತ ತರ್ಪಣದಿಂದ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. ದೇಶ ಗಂಡಾಂತರ ಎರುರಿಸುತ್ತಿರುವ ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯವನ್ನು ಮುಂದಿನ ಪೀಳಿಗೆಗೆ ಉಳಿಸಿ ಹೋಗುವುದು ದೊಡ್ಡ ಸವಾಲಾಗಿದೆ ಎಂದು ಹೇಳಿದರು.


ರಾಷ್ಟ್ರೋತ್ಥಾನ ಸಾಹಿತ್ಯ ಸಂಪಾದಕ ವಿಘ್ನೇಶ್ವರ ಭಟ್ ಮಾತನಾಡಿ, ಡಾ. ಬಾಬು ಕೃಷ್ಣಮೂರ್ತಿ ಅವರ 'ಅಜೇಯ ಮತ್ತು ಅದಮ್ಯ' ಈ ಎರಡೂ ಕೃತಿಗಳು ಚಂದ್ರಶೇಖರ್ ಆಜಾದ್ ಮತ್ತು ವಾಸುದೇವ ಬಲವಂತ ಪಡಕೆ ಅವರ ಜೀವನ ಗಾಥೆಯನ್ನು ಉತ್ತಮವಾಗಿ ಚಿತ್ರಿಸಲಾಗಿದೆ ಎಂದರು.

ಕ್ರಾಂತಿಕಾರಿಗಳ ಕುರಿತು ಇನ್ನೂ ಅನೇಕ ಕೃತಿಗಳು, ಲೇಖನಗಳನ್ನೂ ಸಹ ಬರೆದಿದ್ದಾರೆ. ಎಲ್ಲಾ ಕೃತಿಗಳು ಸಹ ಓದಿಸಿಕೊಂಡು ಹೋಗುತ್ತವೆ. ಇವರ ಕೃತಿಗಳನ್ನು ಓದಿದ ಕೆಲವರು ತಮ್ಮ ಮಕ್ಕಳಿಗೆ ಚಂದ್ರಶೇಖರ್ ಆಜಾದ್, ಅಜೇಯ ಎಂದು ನಾಮಕರಣ ಮಾಡಿದ ಉದಾಹರಣೆಗಳಿವೆ ಎಂದು ಹೇಳಿದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯದರ್ಶಿ ಹೆಚ್. ಜಯಣ್ಣ, ರಾಷ್ಟ್ರೋತ್ಥಾನ ಬಳಗದ ಟಿ.ಹೆಚ್.ಎಂ. ಜಯದೇವಯ್ಯ, ವರ್ತಮಾನ ವೇದಿಕೆ ಎಂ. ಜಿ. ಪಂಚಾಕ್ಷರಿ, ಶಂಭುಲಿಂಗಪ್ಪ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎಹೆಚ್. ಶಿವಯೋಗಿಸ್ವಾಮಿ, ಡಾ.ಎಸ್. ಆರ್. ಹೆಗಡೆ ಮತ್ತಿತರರು ಭಾಗವಹಿಸಿದ್ದರು. ಬಿ. ಹಾಲಸ್ವಾಮಿ ನಿರೂಪಿಸಿದರು. ವಿಜಯಕುಮಾರ್ ವಂದಿಸಿದರು.

# ಎನ್‌ಐಆರ್‌ಎಫ್ ಪಟ್ಟಿಯಲ್ಲಿ ದಾವಿವಿ

## ಅತ್ಯುನ್ನತ ಸಂಶೋಧನಾ ಚಟುವಟಿಕೆಗೆ ಸಂದ ಮನ್ನಣೆ



ದಾವಣಗೆರೆ, ಆ. 13- ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯವು ಪ್ರತಿ ವರ್ಷ ಬಿಡುಗಡೆ ಮಾಡುವ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು-2024 (ಎನ್‌ಐಆರ್‌ಎಫ್)ರ ಪಟ್ಟಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯವು ಮುಂಚೂಣಿ ಸ್ಥಾನ ಪಡೆದಿದೆ.

ಎನ್‌ಐಆರ್‌ಎಫ್ ಸಿದ್ಧಪಡಿಸಿರುವ ರಾಜ್ಯ ಸರ್ಕಾರಿ ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯವು 51ರಿಂದ 100ರ ಶ್ರೇಣಿ ಪಟ್ಟಿಯಲ್ಲಿ ಸ್ಥಾನ ಗಳಿಸಿ, ಗಮನ ಸೆಳೆದಿದೆ. ವಿಶ್ವವಿದ್ಯಾಲಯವು ರಾಜ್ಯದ ಕುವೆಂಪು, ತುಮಕೂರು, ಧಾರವಾಡ ವಿಶ್ವವಿದ್ಯಾಲಯಗಳೊಂದಿಗೆ ಪ್ರಮುಖ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

ದಾವಣಗೆರೆ ವಿಶ್ವವಿದ್ಯಾನಿಲಯವು ಶೈಕ್ಷಣಿಕವಾಗಿ ಸಂಶೋಧನೆ, ಬೋಧನೆ, ಸಂಶೋಧನಾ ಯೋಜನೆಗಳು, ಪೇಟೆಂಟ್, ಸಂಶೋಧನಾ ನಾವೀನ್ಯತೆ, ವಿಸ್ತರಣಾ ಚಟುವಟಿಕೆಗಳ ಮಾನದಂಡಗಳಲ್ಲಿ ಉತ್ತಮ ಅಂಕ ಗಳಿಸಿದ್ದು, ಶ್ರೇಯಾಂಕ ಪಟ್ಟಿಯಲ್ಲಿ ಸ್ಥಾನ ಪಡೆಯಲು ನೆರವಾಗಿದೆ. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ 600ಕ್ಕೂ ಸಂಶೋಧನಾ ಪ್ರಬಂಧಗಳು ಜಾಗತಿಕ ಮಟ್ಟದ ಸಂಶೋಧನಾ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.

ವಿಶ್ವವಿದ್ಯಾನಿಲಯದ ಎಲ್ಲ ವಿಭಾಗಗಳ ಪ್ರಾಧ್ಯಾಪಕರು ಸಂಘಟನಾತ್ಮಕವಾಗಿ, ಸಾಂಘಿಕವಾಗಿ ಕೈಗೊಂಡ ಸಂಶೋಧನಾ ಚಟುವಟಿಕೆಗಳು, ಸಂಶೋಧನಾ ಯೋಜನೆಗಳ ಕಾರ್ಯಾನುಷ್ಠಾನಗಳಿಂದಾಗಿ ವಿಶ್ವವಿದ್ಯಾನಿಲಯವು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಇಂಥ ಮಹತ್ತರ ಸಾಧನೆ ಮಾಡಿರುವುದು ದಾವಣಗೆರೆ ವಿಶ್ವವಿದ್ಯಾನಿಲಯದ ಹೆಮ್ಮೆಯಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳ ಮೂಲಕ ಉನ್ನತ ಶ್ರೇಯಾಂಕ ಪಡೆಯಲು ಪ್ರೇರಣೆಯಾಗಿದೆ ಎಂದು ಕುಲಪತಿ ಪ್ರೊ.ಬಿ.ಡಿ.ಕುಂಬಾರ ತಿಳಿಸಿದ್ದಾರೆ.

ಎನ್‌ಐಆರ್‌ಎಫ್ ಶ್ರೇಯಾಂಕ ಪಟ್ಟಿಯಲ್ಲಿ ಸ್ಥಾನ ಪಡೆಯಲು ಕಳೆದ ಐದು ವರ್ಷಗಳಿಂದ ನಡೆಸಿದ ನಿರಂತರ ಪ್ರಯತ್ನವು ಈ ಬಾರಿ ಕೈಗೂಡಿದೆ. ಸಂಶೋಧನೆಯಲ್ಲಿ ಉತ್ತಮ ಸಾಧನೆ ಮಾಡಿದ್ದರೂ ಉತ್ತಮ ಗುಣಮಟ್ಟದ ಪ್ರಯೋಗಾಲಯವೂ ಸೇರಿದಂತೆ ಕನಿಷ್ಠ ಮೂಲಸೌಲಭ್ಯಗಳ ಕೊರತೆಯಿಂದ ಇತರೆ ಮಾನದಂಡಗಳಲ್ಲಿ ವೈಫಲ್ಯತೆ ಕಾಣುತ್ತಿತ್ತು. ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಬಿ.ಸಿ.ಪ್ರಸನ್ನಕುಮಾರ, ಐಕ್ಯೂಎಸಿ ನಿರ್ದೇಶಕ ಪ್ರೊ.ಗೋವಿಂದಪ್ಪ, ಪಿಎಂಇ ನಿರ್ದೇಶಕ ಪ್ರೊ.ಡಿ.ಜಿ. ಪ್ರಕಾಶ ಅವರ ನೇತೃತ್ವದ ಸಮಿತಿಯು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿದೆ. ಸಮಿತಿ ಸದಸ್ಯರೆಲ್ಲರ ಸಾಂಘಿಕ ಪ್ರಯತ್ನವೂ ವಿಶ್ವವಿದ್ಯಾನಿಲಯದ ಶ್ರೇಯಾಂಕ ಸಾಧನೆಗೆ ಪೂರಕವಾಗಿದೆ ಎಂದು ಪ್ರೊ.ಕುಂಬಾರ ಶ್ಲಾಘಿಸಿದ್ದಾರೆ.

ಮುಂದಿನ ದಿನಗಳಲ್ಲಿ ಸಂಶೋಧನೆಗೆ ಅಗತ್ಯವಿರುವ ಪ್ರಯೋಗಾಲಯ ಹಾಗೂ ಇನ್ನಿತರೆ ಎಲ್ಲ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ವಿದ್ಯಾರ್ಥಿಗಳನ್ನೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವ ಪ್ರಾಯೋಗಿಕ ಶಿಕ್ಷಣಕ್ಕೂ ವಿಶ್ವವಿದ್ಯಾನಿಲಯವು ಆದ್ಯತೆ ನೀಡಲಿದೆ. ಇದಕ್ಕೆ ಪೂರಕವಾಗಿ ವಿದೇಶಿ ವಿಶ್ವವಿದ್ಯಾಲಯಗಳ ಜೊತೆಗೆ ಸಂಶೋಧನಾ ಒಡಂಬಡಿಕೆಗೂ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

# ಅವಕಾಶ ವಂಚಿತರೆಂದು ಕುಗ್ಗಬೇಡಿ, ಸತತ ಪರಿಶ್ರಮದಿಂದ ಯಶಸ್ಸಿನೆಡೆಗೆ ಮುನ್ನಡೆಯಬೇಕು



**ದವನ್ ಮತ್ತು ನೂತನ ಕಾಲೇಜಿನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಡಾ.ಜಯಂತ್ ಕಿವಿಮಾತು**

ದಾವಣಗೆರೆ, ಆ. 13- ಮನುಷ್ಯನ ವ್ಯಕ್ತಿತ್ವ ವಿಕಸನ ಶಿಕ್ಷಣ ಪಡೆಯುವುದರಿಂದ ಮಾತ್ರ ಸಾಧ್ಯ ಹಾಗೂ ಪ್ರತಿಯೊಬ್ಬರ ಅಭಿವೃದ್ಧಿಗೆ ವಿದ್ಯೆಯು ಸಹಕಾರಿಯಾಗಲಿದೆ. ಸಾಮಾನ್ಯರಾಗಿದ್ದು ಶಿಕ್ಷಣ ಪಡೆದವರು ಅತ್ಯುನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಇದಕ್ಕೆ ಸ್ಪಷ್ಟ ನಿದರ್ಶನಗಳು ಎಂದು ಸಿದ್ದಗಂಗಾ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಜಯಂತ್ ಡಿ.ಎಸ್. ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮೊನ್ನೆ ಏರ್ಪಾಡಾಗಿದ್ದ ದವನ್ ಹಾಗೂ ನೂತನ ಪದವಿ ಪೂರ್ವ ಕಾಲೇಜಿನ 'ಶೈಕ್ಷಣಿಕ ವರ್ಷಾರಂಭ ಮತ್ತು ಪ್ರತಿಭಾ ಪುರಸ್ಕಾರ' ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಮನುಷ್ಯನಿಗೂ ಶಿಕ್ಷಣ ಅಗತ್ಯ. ಅದರಿಂದಲೇ ನಮ್ಮ ಸಾಧನೆಯ ಹಾದಿ ಸುಗಮವಾಗುವುದು. ಆರಂಭಿಕವಾಗಿ ಅವಕಾಶ ವಂಚಿತರೆಂದು ಕುಗ್ಗಬೇಡಿ - ಛಲ, ವಿಶ್ವಾಸ ಹಾಗೂ ಸತತ ಪರಿಶ್ರಮದಿಂದ ಯಶಸ್ಸಿನೆಡೆಗೆ ಮುನ್ನಡೆಯಿರಿ ಎಂದು ಕಿವಿಮಾತು ಹೇಳಿದರು.

ದವನ್ ಹಾಗೂ ನೂತನ ವಿದ್ಯಾ ಸಂಸ್ಥೆಯಿಂದ ಪ್ರತಿಭಾ ಪುರಸ್ಕಾರ ಪಡೆಯುತ್ತಿರುವ ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಮಹೋನ್ನತಿ ಸಾಧಿಸಿ ತಂದೆ-ತಾಯಿ, ಗುರುಗಳಿಗೆ ಕೀರ್ತಿ ತರಬೇಕು ಎಂದು ಅವರು ಆಶಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ದವನ್ ಕಾಲೇಜಿನ ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಮ್ಮ ಸಂಸ್ಥೆ ಪ್ರತಿ ವಿದ್ಯಾರ್ಥಿಗಳ ಸಾಧನೆಯನ್ನು ನಿರೀಕ್ಷಿಸುತ್ತದೆ. ಜೊತೆಗೆ ಬೆಂಬಲಿಸುತ್ತದೆ. ನಿಮ್ಮ ಯಶಸ್ಸಿನ ಪಾಲುದಾರರಾದ ನಿಮ್ಮ ತಂದೆ ತಾಯಿಗಳಿಗೆ, ಗುರುಗಳಿಗೆ ನಿಮ್ಮ ಸಾಧನೆಯೇ ಬಹುದೊಡ್ಡ ಕೊಡುಗೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದವನ್ ಕಾಲೇಜಿನ ಕಾರ್ಯದರ್ಶಿ ಹಾಗೂ ನೂತನ ವಿದ್ಯಾ ಸಂಸ್ಥೆಯ ರಿಜಿಸ್ಟ್ರಾರ್ ವೀರೇಶ್ ಪಟೇಲ್ ಮಾತನಾಡಿ, ನಾವು ನಮ್ಮ ಸಂಸ್ಥೆ ಕೊಡ ಮಾಡುವ ವಿದ್ಯಾರ್ಥಿ ವೇತನ, ನಿಮ್ಮ ಸಾಧನೆಯ ಪ್ರೋತ್ಸಾಹ ಬೆಂಬಲವಾಗಿದೆ. ಪ್ರತಿ ವರ್ಷವೂ ವಿದ್ಯಾರ್ಥಿಗಳು ಒಳ್ಳೆಯ ಅಂಕಗಳನ್ನು ಪಡೆದು ವಿದ್ಯಾರ್ಥಿ ವೇತನ ಪಡೆಯುವವರ ಸಂಖ್ಯೆ ದ್ವಿಗುಣವಾಗಲಿ, ನಿಮ್ಮ ಭವಿಷ್ಯದ ಶೈಕ್ಷಣಿಕ ಬದುಕು ಯಶಸ್ಸಿನ ಪಯಣವಾಗಲಿ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿ ಎಂದು ಹಾರೈಸಿದರು. ಸಮಾರಂಭದಲ್ಲಿ ಕಳೆದ ಶೈಕ್ಷಣಿಕ ಸಾಲಿನ ಪಿಯುಸಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ. 85, 90, 95 ಫಲಿತಾಂಶ ಪಡೆದ 114 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ದವನ್ ಕಾಲೇಜಿನ ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಟ್ಟು, ವಿಜ್ಞಾನ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಮನುಶ್ರೀ ಪಾಟೀಲ್, ಉಮ್ಮೈರಾ ಖಾನಂ, ರಂಜಿತಾ ಆರ್. ಹಾಗೂ ವಾಣಿಜ್ಯ ವಿಭಾಗದಲ್ಲಿ ಖುಷ್ಬು ರಜಪೂತ್, ಐಶ್ವರ್ಯ ಗೊಲ್ಲರ್, ಸಾಕ್ಷಿ ಪಿ ಜೈನ್, ಪ್ರೀತಿ ಹೆಚ್.ಟಿ. ಇವರನ್ನು ಗೌರವಿಸಿದರು.

ವಿದ್ಯಾರ್ಥಿಗಳು ವಿಷಯವಾರು ನೂರಕ್ಕೆ ನೂರು ಅಂಕಗಳನ್ನು ಗಳಿಸಲು ಸಹಕರಿಸಿದ ಉಪನ್ಯಾಸಕರಾದ ಶ್ರೀಮತಿ ಅಶ್ವಿನಿ ಹೆಚ್.ಸಿ., ನಿತಿನ್ ಕುಮಾರ್, ರೋಷನ್ ಜಮೀರ್, ಶ್ರೀಮತಿ ತೃಪ್ತಿ ಜನ್ನು, ಶ್ರೀಮತಿ ಶಾಯಿಸ್ತ ಅಂಜುಮ್ ಹಾಗೂ ಇತರೆ ಸಿಬ್ಬಂದಿ ವರ್ಗದವರನ್ನು ಗೌರವಿಸಲಾಯಿತು.

ವಿದ್ಯಾರ್ಥಿನಿಯರಾದ ಎಂ.ಎಂ. ಭವಿಷ್ಯ, ಎಂ.ಸಂಜನಾ ಪ್ರಾರ್ಥನಾ ನೃತ್ಯ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ನೂತನ ವಿದ್ಯಾಸಂಸ್ಥೆಯ ಖಜಾಂಚಿ ಶ್ರೀಮತಿ ಎಂ.ಇ. ವಾಣಿ, ನೂತನ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಕೆ.ಟಿ. ಸುಮಿತ್ರಾ ಉಪಸ್ಥಿತರಿದ್ದರು.

# ನಿತ್ಯ ಶಿವನ ಆರಾಧನೆ ಮಾಡಿದರೆ ಮನಃಶ್ಯಾಂತಿ ಪ್ರಾಪ್ತಿ

## ಹರಿಹರದಲ್ಲಿನ ಶ್ರೀ ಅಮೃತೇಶ್ವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯಲ್ಲಿ ದತ್ತಾತ್ರೇಯ ಭಟ್ಟರ ಪ್ರತಿಪಾದನೆ



ಹರಿಹರ, ಅ.13- ಪ್ರತಿ ನಿತ್ಯ ಶಿವನನ್ನು ಆರಾಧನೆ ಮಾಡಿದರೆ ಆರೋಗ್ಯ, ಐಶ್ವರ್ಯ, ಆಯುಷ್ಯ, ಮನಃಶ್ಯಾಂತಿ ಪ್ರಾಪ್ತಿಯಾಗುತ್ತದೆ ಎಂದು ಜೋಯಿಸ ರಾದ ದತ್ತಾತ್ರೇಯ ಭಟ್ಟರು ಪ್ರತಿಪಾದಿಸಿದರು.

ನಗರದ ದೇವಸ್ಥಾನ ರಸ್ತೆಯ ಕಾಳಮ್ಮ ದೇವಸ್ಥಾನ ಪಕ್ಕದ ಶ್ರೀ ಅಮೃತೇಶ್ವರ ಸ್ವಾಮಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನಿಮಿತ್ಯ ಇಂದು ಹೋಮ, ಹವನ ಪೂಜಾ ಕಾರ್ಯವನ್ನು ನೆರವೇರಿಸಿ ಅವರು ಮಾತನಾಡಿದರು.

ಶ್ರಾವಣ ಮಾಸದಲ್ಲಿ ಶಿವನ ಆರಾಧನೆ ಮಾಡುವುದರಿಂದ ಮನಸ್ಸಿನಲ್ಲಿನ ಅಂಧಕಾರ ತೊಲಗಿ ಹಣ, ಐಶ್ವರ್ಯ, ಆಯುಷ್ಯ ವೃದ್ಧಿಯಾಗಿ ಆರೋಗ್ಯದಲ್ಲಿ ಯಾವುದೇ ರೀತಿಯ ತೊಂದರೆ ಬರಲಿಕ್ಕೆ ಸಾಧ್ಯವಿಲ್ಲ. ಪ್ರಾತಃ ಕಾಲದಲ್ಲಿ ಶಿವನ ಆರಾಧನೆ ಮಾಡಿದರೆ ಪಾಪಗಳು ತೊಲಗುತ್ತವೆ. ಮಧ್ಯಾಹ್ನ ಆರಾಧನೆ ಮಾಡಿದರೆ ಜನ್ಮದ ಪಾಪ ತೊಲಗುತ್ತವೆ. ಸಂಜೆ ಆರಾಧನೆ ಮಾಡಿದಾಗ ಪೂರ್ವ ಜನ್ಮದ ಪಾಪಗಳು ತೊಲಗುತ್ತವೆ ಎಂದು ಅವರು ವಿಶ್ಲೇಷಿಸಿದರು.

ಹರಿಹರ ನಗರ ಪಂಚಲಿಂಗ ಕ್ಷೇತ್ರವಾಗಿದೆ. ನೂರ ಎಂಟು ಲಿಂಗೇಶ್ವರ, ಸಂಗಮೇಶ್ವರ, ಅಡಿಕೇಶ್ವರ, ಜೋಡು ಬಸವೇಶ್ವರ, ಅಮೃತೇಶ್ವರ ಐದು ಶಿವಲಿಂಗಗಳೂ ಸಹ ಒಂದೊಂದು ರೀತಿಯಲ್ಲಿ ಮಹತ್ವ ಪಡೆದಿವೆ. ಅದರಂತೆ ನಾಳೆ ಪ್ರತಿಷ್ಠಾಪನೆಯಾಗುತ್ತಿರುವ ಅಮೃತೇಶ್ವರ ಸ್ವಾಮಿ ಸಹ ತನ್ನದೇ ಆದ ಇತಿಹಾಸ ಹೊಂದಿರುವ ದೇವರಾಗಿದೆ ಎಂದು ಹೇಳಿದರು.

ಅಮೃತೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಸದಾಶಿವ ಬೊಂಗಾಳೆ ಮಾತನಾಡಿ, ಅನೇಕ ವರ್ಷಗಳ ಹಿಂದೆ ಅಮೃತೇಶ್ವರ ದೇವಸ್ಥಾನ ಬಹಳ ಚಿಕ್ಕ ಮೂರ್ತಿ ಹೊಂದಿತ್ತು. ಅದು ಕೂಡ ಇತ್ತೀಚೆಗೆ ಶಿಥಿಲವಾಗಿತ್ತು. ಈ ಮೂರ್ತಿಯನ್ನು ಹಿಂದಿನ ಕಾಲದಲ್ಲಿ ಬೊಂಗಾಳೆ ಕುಟುಂಬದ ಸದಸ್ಯರು ಭಕ್ತಿಯಿಂದ ಆರಾಧಿಸುತ್ತಾ ಬಂದಿದ್ದಾರೆ. ಸುಬ್ಬಣ್ಣ ಎಂಬುವರ ಕನಸಿನಲ್ಲಿ ದೇವರು ಬಂದು ಅಮೃತೇಶ್ವರ ದೇವರ ಮೂರ್ತಿಯನ್ನು ನಿರ್ಮಿಸಿ ಎಂಬುದರ ಬಗ್ಗೆ ವಾಣಿ ನುಡಿಸಿದ ಪರಿಣಾಮ ಬೊಂಗಾಳೆ ಕುಟುಂಬದ ಸದಸ್ಯರೆಲ್ಲರನ್ನು ಒಗ್ಗೂಡಿಸಿ ಹೊಸದಾಗಿ ಅಮೃತೇಶ್ವರ ಮೂರ್ತಿಯನ್ನೂ ಪ್ರತಿಷ್ಠಾಪಿಸುವ ಕಾರ್ಯ ಮಾಡಲಾಗಿದೆ. ಇಲ್ಲಿನ ದೇವಸ್ಥಾನ ನಿರ್ಮಾಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಹಕಾರ ನೀಡಿದ ಬೊಂಗಾಳೆ ಶೇಷಪ್ಪ ದೇವುಬಾಯಿ ಇವರ ಜ್ಞಾಪಕಾರ್ಥವಾಗಿ ಕಟ್ಟಡ ನಿರ್ಮಾಣ ಮಾಡಲಾಗಿದೆ. ಬೊಂಗಾಳೆ ಸುಬ್ಬಣ್ಣ, ಬೈರಪ್ಪ, ಕಾಳಪ್ಪ ಇವರು ತಮ್ಮ ಅತ್ಯಮೂಲ್ಯವಾದ ಸೇವೆ ಮಾಡಿದ್ದಾರೆ ಎಂದು ಹೇಳಿದರು.

ಬೊಂಗಾಳೆ ಕಾಳಪ್ಪ ಮಾತನಾಡಿ, ಅಮೃತೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಸರ್ಕಾರದಿಂದ ಯಾವುದೇ ರೀತಿಯ ಸಹಕಾರ ಪಡೆಯದೇ, ಬೊಂಗಾಳೆ ಕುಟುಂಬದ ಸದಸ್ಯರಿಂದ ಅಂದಾಜು 25 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನ ಜೀರ್ಣೋದ್ಧಾರ ಮಾಡಲಾಗಿದೆ ಎಂದು ತಿಳಿಸಿದರು.

ರಾಘವೇಂದ್ರ ಬೊಂಗಾಳೆ ಮಾತನಾಡಿ, ಅಮೃತೇಶ್ವರ ಸ್ವಾಮಿಗೆ ನಾಳೆ ದಿನಾಂಕ 14 ರ ಬುಧವಾರ ಮುಂಜಾನೆಯಿಂದ ಹೋಮ, ಬಲಿಹರಣ, ಪ್ರಾಣ ಪ್ರತಿಷ್ಠಾಪನೆ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆಯಲಿವೆ. ಕಲಶ ಸ್ಥಾಪನೆಯನ್ನು ಚಿತ್ರದುರ್ಗದ ಸದ್ಗುರು ಶ್ರೀ ಶಿವಲಿಂಗಾನಂದ ಸ್ವಾಮೀಜಿ ನೆರವೇರಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದ್ವಾರಕನಾಥ ಬೊಂಗಾಳೆ, ಅರುಣ್ ಕುಮಾರ್ ಬೊಂಗಾಳೆ, ಜ್ಞಾನೇಶ್ವರ ಬೊಂಗಾಳೆ, ಡಾ. ಸಚ್ಚಿನ್ ಬೊಂಗಾಳೆ, ನಂದಕುಮಾರ್ ಖಟಾವ್ಕರ್, ಗಿರಿಜಾ ಖಟಾವ್ಕರ್, ಹರಿ ಪ್ರಸಾದ್, ಸುಭಾಷ್ ಬೊಂಗಾಳೆ, ಪ್ರತೀಕ ಬೊಂಗಾಳೆ, ಅನ್ನಪೂರ್ಣ ಮಹೇಂದ್ರಕರ್, ಸುರೇಖಾ ಅರುಣ್ ಬೊಂಗಾಳೆ, ಅನಸೂಯಾ, ಶಶಿಕಲಾ, ಪದ್ಮಾವತಿ ಸುಭಾಷ್ ಬೊಂಗಾಳೆ, ಪರಶುರಾಮ್ ಹಾಗೂ ಇತರರು ಹಾಜರಿದ್ದರು.




## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಜಿ.ಎಂ.ಐ.ಟಿ. ಕಾಲೇಜು, ದೇವರಾಜ ಅರಸ್ ಬಡಾವಣೆ, ಪೂಜಾ ಹೋಟೆಲ್, ಸಾಯಿ ಹೋಟೆಲ್, ಕೋರ್ಟ್ ಸುತ್ತ ಮುತ್ತ, ಗಿರಿಯಪ್ಪ ಲೇಔಟ್, ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ವಾಣಿಜ್ಯ ತೆರಿಗೆ ಕಚೇರಿ, ದೂಡಾ ಕಚೇರಿ, ಬಿ.ಎಸ್.ಎನ್.ಎಲ್ ಕಚೇರಿ, ವಿನಾಯಕ ನಗರ, ಶಂಕರ್ ವಿಹಾರ್ ಬಡಾವಣೆ, ಮೋತಿ ಬೇಕರಿ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.




# ಶೀಘ್ರ ದಾವಣಗೆರೆ-ಚಿತ್ರದುರ್ಗ ಅವಳಿ ಜಿಲ್ಲೆಗಳ ಮಾದಿಗ ಸಮಾವೇಶ

## ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ



ದಾವಣಗೆರೆ, ಆ. 13- ಮಾದಿಗ ಸಮುದಾಯವನ್ನು ನಿರ್ಲಕ್ಷಿಸುತ್ತಿರುವ ರಾಜಕೀಯ ಪಕ್ಷಗಳಿಗೆ ತಕ್ಕ ಪಾಠ ಕಲಿಸಬೇಕಿದೆ. ಈ ನಿಟ್ಟಿನಲ್ಲಿ ಡಿಸೆಂಬರ್ ಅಥವಾ ಜನವರಿಯಲ್ಲಿ ಶೀಘ್ರವೇ ದಾವಣಗೆರೆ-ಚಿತ್ರದುರ್ಗ ಅವಳಿ ಜಿಲ್ಲೆಗಳನ್ನೊಳ ಗೊಂಡಂತೆ ಮಾದಿಗ ಸಮಾವೇಶ ಹಮ್ಮಿಕೊಳ್ಳಲಾಗುವುದು ಎಂದು ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ಹೇಳಿದರು.

ನಗರದ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘ, ಆದಿ ಕರ್ನಾಟಕ ವಿದ್ಯಾರ್ಥಿ ನಿಲಯ ಹಾಗೂ ಡಾ. ಬಿ.ಎಂ.ಟಿ. ಪಿಯು ಕಾಲೇಜಿನ ಆಶ್ರಯದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಎಲ್ಲಾ ರಾಜಕೀಯ ಪಕ್ಷಗಳು ಮಾದಿಗ ಸಮುದಾಯವನ್ನು ಕಡೆಗಣಿಸುತ್ತಿವೆ. ಅಂತಹ ಪಕ್ಷಗಳಿಗೆ ಪಾಠ ಕಲಿಸುವ ನಿಟ್ಟಿನಲ್ಲಿ ಅವಳಿ ಜಿಲ್ಲೆಗಳ ಮಾದಿಗ ಸಮಾವೇಶವು ನಮ್ಮ ಸಮುದಾಯದ ಶಕ್ತಿ ಪ್ರದರ್ಶಿಸಲಿದೆ ಎಂದರು.

ಹರಿಜನ ಸಮುದಾಯದ ಸಂಘಟನೆಗೆ ಕೇಂದ್ರ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಕೆ.ಹೆಚ್. ಮುನಿಯಪ್ಪ ಸೇರಿದಂತೆ ಎಲ್ಲಾ ಜಾತಿಯ ಜನಪ್ರತಿನಿಧಿಗಳನ್ನು ಸಮಾವೇಶಕ್ಕೆ ಆಹ್ವಾನಿಸಲಾಗುವುದು. ಮಾದಿಗ ಸಮುದಾಯದ ಬಗ್ಗೆ ನಿರ್ಲಕ್ಷ್ಯ ಮಾಡಿದರೆ ಮುಂಬರುವ ದಿನಗಳಲ್ಲಿ ನಿಮಗೆ ಕಷ್ಟವಾಗಲಿದೆ. ಸಮುದಾಯಕ್ಕೆ ನಿವೇಶನ ನೀಡಿದ್ದರೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಎದುರು ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಅವರು ಎಚ್ಚರಿಸಿದರು.

ದೂಡಾ ಅಧ್ಯಕ್ಷರಾದವರು ತಮ್ಮ ತಮ್ಮ ಜಾತಿಗಳಿಗೆ ನಿವೇಶನಗಳನ್ನು ಮಾಡಿಕೊಂಡಿದ್ದರೆ. ಆದರೆ, ಶೋಷಿತ ಸಮುದಾಯದ ಹರಿಜನ ಸಮುದಾಯಕ್ಕೆ ಇದುವರೆಗೂ ನಿವೇಶನವನ್ನೇ ನೀಡದೇ ವಂಚಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹರಿಜನ ಸಮುದಾಯದ ಶಾಲೆಗಾಗಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ನಿವೇಶನ ಮಂಜೂರು ಮಾಡಬೇಕು ಎಂದು ಅವರು ಕೇಳಿಕೊಂಡರು.

ಹರಿಜನರ ಮತಗಳು ಬೇಕು, ಹರಿಜನರ ಸಹಕಾರವೂ ಬೇಕು. ಆದರೆ, ಅದೇ ಹರಿಜನ ಸಮುದಾಯಕ್ಕೆ ಯಾವುದೇ ಸೌಲಭ್ಯಗಳು ಸರ್ಕಾರದಿಂದ ಸರಿಯಾಗಿ ಸಿಗುವುದಿಲ್ಲವೆಂದರೆ ಏನರ್ಥ? ಹರಿಜನರ ಮಕ್ಕಳು ಓದಲು ಜಾಗ ಕೊಡಲಿಲ್ಲ. ಹರಿಜನ ಮಕ್ಕಳ ಮದುವೆಗೆ ಅನುಕೂಲವಾಗಲೆಂದು ಸಮುದಾಯ ಭವನ ನಿರ್ಮಿಸುವುದಕ್ಕೂ ಜಾಗ ಒದಗಿಸಲಿಲ್ಲ. ಕಳೆದ 4 ದಶಕದಿಂದ ಕಾಂಗ್ರೆಸ್ ಪಕ್ಷದಲ್ಲಿ ನಿಸ್ವಾರ್ಥದಿಂದ ಕೆಲಸ ಮಾಡಿದರೂ ಕಾಂಗ್ರೆಸ್‌ನವರು ಸ್ಪಂದನೆ ನೀಡಲಿಲ್ಲ, ಬಿಜೆಪಿಯವರೂ ನೀಡಲಿಲ್ಲ ಎಂದು ಉಭಯ ಪಕ್ಷಗಳ ವಿರುದ್ಧ ವೀರಭದ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸನ್ಮಾನಿತರಾದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಹರಿಜನ ಸಮುದಾಯದ ಶಾಲೆ ಮತ್ತು ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಕೇಳಿದ್ದೀರಿ. ಶೀಘ್ರವೇ ಸಿಎ ನಿವೇಶನಗಳ ಕುರಿತಂತೆ ಪ್ರಾಧಿಕಾರದ ಸಭೆ ನಡೆಸಲಾಗುವುದು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಜೊತೆಗೆ ಚರ್ಚಿಸಿ, ಸಿಎ ನಿವೇಶನ ಒದಗಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಪಾಲಿಕೆ ಮೇಯರ್ ಬಿ.ಹೆಚ್. ವಿನಾಯಕ ಪೈಲ್ವಾನ್, ನಾಮನಿರ್ದೇಶಿತ ಸದಸ್ಯರಾದ ಎಲ್.ಎಂ.ಹೆಚ್. ಸಾಗರ್, ಭಾಸ್ಕರ್ ರೆಡ್ಡಿ, ಶಾಮನೂರಿನ ಕಣ್ಣಾಳ ಅಂಜಿನಪ್ಪ, ಎಸ್. ರಾಜಣ್ಣ ಇತರರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಎಲ್. ಎಂ. ಹನುಮಂತಪ್ಪ, ಬಿ.ಎಂ. ಈಶ್ವರಪ್ಪ ಗಾಂಧಿನಗರ, ರಾಕೇಶ, ಚಂದ್ರು ಡೋಲಿ, ಶುಭಮಂಗಳ, ಹೆಚ್.ಜೆ. ಮೈನುದ್ದೀನ್ ಹಾಗೂ ಇತರರು ಇದ್ದರು.

**IN THE COURT OF THE 4th ADDITIONAL CIVIL JUDGE AND JMFC COURT AT DAVANGERE**

O.S. NO. 403/2023

Plaintiff: Mahammed Saleem *V/S*

Defendants: Mahammed Nadeem and another

Defendant No.2: Smt. Neha banu W/o Mahammed Imran, Aged about 26 years, House hold, Karekatte village, Channagiri taluk, Davangere district.

**NOTICE UNDER ORDER 05 RULE 20 OF CPC TO THE DEFENDANT NO.2 BY SUBSTITUTED SERVICE BY MEANS OF PAPER PUBLICATION.**

Whereas, the above named plaintiff filed in the above suit for Specific Performance of Contract and other consequential reliefs. The above named defendant No.2 avoided the services of the summons sent through the Hon'ble court and by registered post with acknowledgement due. Hence, this publication.

Now, the above suit is posted for appearance of the defendant No.2 on o1-10-2024 and you are called upon to take notice to appear on the said date at 10.45 A.M. either personally or through an advocate, failing which all further proceedings will take place in your absence.

Issued under my hand and the seal of this court, this 6-8-2024 at Davangere.

**D.H. Raj**
B.A., LL.B.,
Advocate, Davangere

By order of the court
**Chief Ministerial Officer,**
Senior Civil judge Court, Davanagere.




KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas